ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 5 ಮೇ 2012 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**(ಅನುವಾದ: ಚಂಪಾ)**

ಬೆಳಕಿನಿಂದ ಕ್ರಾಂತಿ ಆರಂಭವಾಗಿದೆ. ಈಗ ನಾವು ಅದನ್ನು ಮುಂದಿನ ಹಂತಕ್ಕೆ ಒಯ್ಯುತ್ತಿದ್ದೇವೆ. ವಿಸ್ತರಿಸುತ್ತಿದ್ದೇವೆ. ಜನರಲ್ಲಿ ಜಾಗೃತಿ ಉಂಟಾದಾಗ ಕ್ರಾಂತಿ ಆರಂಭವಾಗುತ್ತದೆ. ವಾಸ್ತವತೆಯನ್ನು ಕುರಿತು ನಮ್ಮಲ್ಲಿ ಅರಿವುಂಟಾಗುತ್ತದೆ. ಜೀವನದ, ಸಾವಿನ, ಸೃಷ್ಟಿಯ, ನವಯುಗದ, 2012ರ ಕೊನೆಯಲ್ಲಿನ ಮಹತ್ತರ ಬದಲಾವಣೆಗಳ ವಾಸ್ತವಗಳು... ಹೀಗೆ ಸಾಕಷ್ಟು ವಾಸ್ತವಗಳಿವೆ. ಎಲ್ಲೆಲ್ಲೂ ಹೆಚ್ಚುತ್ತಿರುವ ಭ್ರಷ್ಟಾಚಾರ, ಹಿಂಸಾಚಾರ, ಶೋಷಣೆ ಮುಂತಾದ ವಾಸ್ತವಗಳಿಗೂ ನಾವು ಎಚ್ಚೆತ್ತುಕೊಳ್ಳುತ್ತಿದ್ದೇವೆ. ನಾವು ಅಸಹಾಯಕರಲ್ಲ ಎಂಬ ವಾಸ್ತವಕ್ಕೂ ನಾವು ಎಚ್ಚೆತ್ತುಕೊಳ್ಳುತ್ತಿದ್ದೇವೆ. ಬೆಳಕು ನಮ್ಮ ನೆರವಿಗಿದೆ.

ಮೊಟ್ಟಮೊದಲ ಜಾಗೃತಿ ಮೂಡಿದ ನಂತರ ನಾವು ಭ್ರಷ್ಟಾಚಾರ, ಹಿಂಸಾಚಾರ, ಶೋಷಣೆಗಳನ್ನು ಮಾನಸಿಕವಾಗಿ ತಿರಸ್ಕರಿಸುತ್ತೇವೆ. ನಮ್ಮಂತೆ ಹಲವಾರು ಜನ ಹೀಗೆ ತಿರಸ್ಕರಿಸಿದರೆ ಅದರ ತರಂಗಗಳು ಬಲಿಷ್ಠವಾಗಿ ಬೆಳೆದು ಸೂಕ್ಷ್ಮಮಟ್ಟದಲ್ಲಿ ಕೆಲಸ ಮಾಡತೊಡಗುತ್ತವೆ. ನಾವು ಬೆಳಕನ್ನು ಚಾನಲ್ ಮಾಡಿದಾಗ ಭ್ರಷ್ಟ ವ್ಯವಸ್ಥೆಗಳು ಪತನವಾಗಲಾರಂಭಿಸುತ್ತವೆ ಹಾಗೂ ಹೊಸ ವ್ಯವಸ್ಥೆಗಳು ಹುಟ್ಟಿಕೊಳ್ಳುತ್ತವೆ. ಭ್ರಷ್ಟಾಚಾರವನ್ನು ಬಹಿರಂಗಗೊಳಿಸಿದಾಗ, ಅತ್ಯಾಚಾರಿ ಶಿಕ್ಷಕನನ್ನು ಜನರು ಸಹಿಸದೆ ಥಳಿಸಿದಾಗ ಹಾಗೂ ಭಯೋತ್ಪಾದನೆಗೆ ಆಸ್ಪದ ಕೊಡದಿದ್ದಾಗ ಬೆಳಕಿನಿಂದ ಕ್ರಾಂತಿಯಾಗುತ್ತಿರುವುದನ್ನು ನಾನು ಕಾಣುತ್ತಿದ್ದೇನೆ.

ಬೆಳಕಿನಿಂದ ಆಗುವ ಕ್ರಾಂತಿ ಮೌನ ಕ್ರಾಂತಿ. ಅಹಿಂಸಾತ್ಮಕ, ರಾಜಕೀಯವಿಲ್ಲದ, ಧಾರ್ಮಿಕವಲ್ಲದ ಅಭೌತಿಕ ಕ್ರಾಂತಿ. ಅದು ಒಂದೇ ದೇಶಕ್ಕೆ ಸೀಮಿತವಾಗಿಲ್ಲ. ಅದು ಜಾಗತಿಕವಾದದ್ದು. ಈ ಅಸಾಧಾರಣ ಕ್ರಾಂತಿಯಲ್ಲಿ ನಾವು ಒಂಟಿಯಲ್ಲ. ಹಲವಾರು ಸೂಕ್ಷ್ಮ ಜೀವಿಗಳು ನಮ್ಮೊಂದಿಗಿದ್ದಾರೆ. ಅವರು ಸೂಕ್ಷ್ಮಮಟ್ಟದಿಂದ ನಮಗೆ ಮಾರ್ಗದರ್ಶನ ನೀಡುತ್ತಾರೆ, ಆಧಾರವಾಗಿರುತ್ತಾರೆ ಹಾಗೂ ಮುನ್ನಡೆಸುತ್ತಾರೆ. ಅವರು ಮಾಡುತ್ತಿರುವ ಕೆಲಸಗಳ ಬಗ್ಗೆ ನಮ್ಮಲ್ಲಿ ಹೆಚ್ಚಿನವರಿಗೆ ತಿಳಿದಿರಲು ಸಾಧ್ಯವಿಲ್ಲ. ಆದರೂ ಪರವಾಗಿಲ್ಲ. ನಮಗೆ ಎಲ್ಲವೂ ತಿಳಿದಿರಬೇಕಾಗಿಲ್ಲ. ಎಲ್ಲವನ್ನೂ ತಿಳಿಯಲು ಸಾಧ್ಯವೂ ಇಲ್ಲ.

7ನೆ ಮೇ ಸಂಜೆ 7.45 ರಿಂದ 8 ಗಂಟೆಯವರೆಗೆ (ಸ್ಥಳೀಯ ಕಾಲ) ನಡೆಯಲಿರುವ ಸಾಮೂಹಿಕ ಲೈಟ್ ಚಾನಲಿಂಗ್‌ನಲ್ಲಿ ಭಾಗವಹಿಸಲು ನಮ್ಮ ವೆಬ್‌ಸೈಟ್‌ನಲ್ಲಿ ನೀಡಿದ್ದ ಆಹ್ವಾನಕ್ಕೆ ಅಭೂತಪೂರ್ವ ಪ್ರತಿಕ್ರಿಯೆಗಳು ಬರುತ್ತಿವೆ. ಜನರಿಗೆ ಇದು ಹೊಸದು, ಅದು ಹೇಗೆ ಕೆಲಸ ಮಾಡಬಹುದೆಂದು ಅವರಿಗೆ ಸಂಪೂರ್ಣವಾಗಿ ಅರ್ಥವಾಗದಿರಬಹುದು. ಆದರೆ ಜನ "ನಾವು ನಮ್ಮ ನಮ್ಮ ಸ್ಥಳಗಳಿಂದಲೇ ಬೆಳಕನ್ನು ಚಾನಲ್ ಮಾಡುವ ಮೂಲಕ ಈ ಕ್ರಾಂತಿಯಲ್ಲಿ ಭಾಗವಹಿಸುತ್ತೇವೆ" ಎಂದು ಹೇಳುತ್ತಿದ್ದಾರೆ. ನಾನು 'ಧನ್ಯವಾದಗಳು' ಎನ್ನುತ್ತೇನೆ. ಇದನ್ನು ಎಲ್ಲರಿಗೂ ಹೇಳಿ. ಪ್ರತಿಯೊಂದು ಆತ್ಮವೂ ಇದಕ್ಕೆ ಪ್ರತಿಕ್ರಿಯಿಸುತ್ತದೆ. ಏಕೆಂದರೆ ಇದು ಆತ್ಮದ ಮಟ್ಟದ ಚಳುವಳಿ. ಬೆಳಕು ಆತ್ಮವನ್ನು ತಟ್ಟುತ್ತದೆ, ಆತ್ಮಸಾಕ್ಷಿಯನ್ನು ತಟ್ಟುತ್ತದೆ. ಆತ್ಮವು ಅರ್ಥಮಾಡಿಕೊಂಡು ಕಾಲದ ಕರೆಗೆ ಓಗೊಡುತ್ತದೆ: ಹೊಸ ಯುಗ, ಹೊಸ ಜಗತ್ತಿಗೆ ಸ್ಪಂದಿಸುತ್ತದೆ.

ಮೇ 7ರಂದು ಬೆಳಕನ್ನು ಚಾನಲ್ ಮಾಡಲು ಈ ಭೂಮಿಯ ಮೇಲಿನ ಎಲ್ಲ ಆತ್ಮಗಳನ್ನೂ ಕೇಳಿಕೊಳ್ಳುತ್ತೇನೆ. ಅದನ್ನು ಅಲ್ಲಿಗೇ ನಿಲ್ಲಿಸಬೇಡಿ. ಪ್ರತಿದಿನ ಬೆಳಕನ್ನು ಚಾನಲ್ ಮಾಡಿ.

ಬೆಳಕು ಮೊದಲು ವೈಯಕ್ತಿಕವಾಗಿ, ನಂತರ ಇಡೀ ಜಗತ್ತಿಗೆ ಶಾಂತಿ, ಪ್ರೀತಿ ಹಾಗೂ ಪರಿಪೂರ್ಣತೆಯನ್ನು ತರುತ್ತದೆ. ಬೆಳಕು ನಮ್ಮಲ್ಲಿ ಪವಾಡಸದೃಶ ಬದಲಾವಣೆಗಳನ್ನು ತರುತ್ತದೆ, ಎಲ್ಲ ವಿಧದಲ್ಲೂ ನಮಗೆ ನೆರವಾಗುತ್ತದೆ ಮತ್ತು ನಾವು ವಿಶ್ವ ಮಾನವರಾಗಿ ಬದಲಾಗುವಂತೆ ಮಾಡುತ್ತದೆ.

ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳೋಣ. ಕಾಲಹರಣ ಬೇಡ. ಈ ಬೆಳಕಿನ ಕ್ರಾಂತಿಯನ್ನು ಬೆಳೆಸೋಣ. ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)


**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಗುರೂಜಿ
ಕೃಷ್ಣಾನಂದ



## ಪ್ರತಿದಿನ ಬೆಳಕನ್ನು ಚಾನಲ್ ಮಾಡಿ

ಭ್ರಷ್ಟಾಚಾರ, ಹಿಂಸಾಚಾರಗಳನ್ನು ದೂರಮಾಡಿ

**ಸೋಮವಾರ, 7ನೇ ಮೇ 2012**
**ನಿಮ್ಮದೇ ಸ್ಥಳದಿಂದ**
**ಲೈಟ್ ಚಾನಲ್ ಸಮ್ಮೇಳನದಲ್ಲಿ ಪಾಲ್ಗೊಳ್ಳಿ**

**ಸಾಯಂಕಾಲ 7:45 ರಿಂದ 15 ನಿಮಿಷಗಳ ಕಾಲ**
**ಬೆಳಕನ್ನು ಚಾನಲ್ ಮಾಡಿ**

ಅಥವಾ
ಸಾಯಂಕಾಲ 7 ಘಂಟೆಗೆ ಬೆಂಗಳೂರಿನ
ಚೌಡಯ್ಯ ಮೆಮೊರಿಯಲ್ ಹಾಲ್‌ಗೆ ಬನ್ನಿ

ನಿಮ್ಮ ಹೆಸರನ್ನು ರಿಜಿಸ್ಟರ್ ಮಾಡಲು 99000 75280ಗೆ ಕರೆ ಮಾಡಿ

**ಸಮ್ಮೇಳನದ ವೆಬ್‌ಕಾಸ್ಟ್, ಸಾಯಂಕಾಲ 7 ರಿಂದ**

**www.lightchannels.com/RevolutionByLight**

### ಸುದ್ದಿ–ಸೂಚನೆ

- 20–5–2012 ರಂದು ತಪೋನಗರದಲ್ಲಿ ಗುರೂಜಿಯವರ ಹುಟ್ಟುಹಬ್ಬವನ್ನು ಆಚರಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 15–05–2012ರೊಳಗೆ ನೋಂದಾಯಿಸಬೇಕು.
- ತಪೋನಗರದಲ್ಲಿ 20–5–2012 ರಂದು ನಡೆಯುವ ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ "Guruji Speaks (Vol-5)" ಮತ್ತು ಶ್ರೀಮತಿ ಪ್ರೇರಣಾ ಕಾಳೆಯವರು ಮರಾಠಿಗೆ ಅನುವಾದಿಸಿದ "Master-Pupil Talk" ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು.
- 2–4–2012ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದ ನಾಲ್ಕನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.
- 4–4–2012ರಂದು ತಪೋನಗರದಲ್ಲಿ ನಡೆದ ಓರಿಯಂಟೇಶನ್ ತರಗತಿಯಲ್ಲಿ 250ಕ್ಕೂ ಹೆಚ್ಚು ಸಾಧಕರು ತಪೋನಗರದಲ್ಲಿ ಮತ್ತು ವೆಬ್‌ಕಾಸ್ಟ್ ಮೂಲಕ ಭಾಗವಹಿಸಿದ್ದರು.

### ಗುರೂಜಿಯವರ ಹುಟ್ಟುಹಬ್ಬ ಕಾರ್ಯಕ್ರಮ
### ಭಾನುವಾರ 20–5–2012

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ ಭಾಷಣ |
| | ಭಾಷಣಗಳು |
| | ಗುರೂಜಿಯವರ ನುಡಿಗಳು |
| | ಪುಸ್ತಕಗಳ ಬಿಡುಗಡೆ |
| | ವಿಶೇಷ ಧ್ಯಾನ |
| | ಗುರೂಜಿಯವರಿಂದ ಆಶೀರ್ವಾದ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11–12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12–1 |
| 13–05–12 | ಶಂಬಲಗ್ರೂಪ್ ಮಧ್ಯಾಹ್ನ 2 ಘಂಟೆಗೆ ಸಂಧಿಸುತ್ತದೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಮಂಗಳ | ಶುಕ್ಲ ದಶಮಿ |
| 06 | ಭಾನು | ಬುದ್ಧಪೂರ್ಣಿಮಾ |
| 13 | ಭಾನು | ಕೃಷ್ಣಾಷ್ಟಮಿ |
| 18 | ಶುಕ್ರ | ಗುರೂಜಿಯವರ ಹುಟ್ಟುಹಬ್ಬ ಬೆಳಕಿನ ವಿಶ್ವಸಂಚಲನದ 4ನೇ ವಾರ್ಷಿಕೋತ್ಸವ |
| 19 | ಶನಿ | ಮಾಸ ಶಿವರಾತ್ರಿ |
| 20 | ಭಾನು | ಗುರೂಜಿಯವರ ಹುಟ್ಟುಹಬ್ಬ ಆಚರಣೆ<br>ಅಮಾವಾಸ್ಯೆ |
| 21 | ಸೋಮ | ಸೂರ್ಯಗ್ರಹಣ: ಬೆಳಗಿನ ಜಾವ 2.26 - 8.19ರವರೆಗೆ |
| 24 | ಗುರು | ಕಲ್ಕಿ ಜಯಂತಿ |
| 29 | ಮಂಗಳ | ಶುಕ್ಲ ಅಷ್ಟಮಿ |
| 31 | ಗುರು | ಶುಕ್ಲ ದಶಮಿ |

**19–5–2012ರಂದು ಬೆಳಿಗ್ಗೆ 11.30 ಘಂಟೆಗೆ ಆನೇಕಲ್‌ನ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**

**ಚೌಡಯ್ಯ ಕಲಾಕ್ಷೇತ್ರದಲ್ಲಿ 'ಲೈಟ್ ಚಾನಲ್ಸ್ ಸಮಾವೇಶ' ಇರುವ ಕಾರಣದಿಂದ 7–5–2012, ಸೋಮವಾರದಂದು ಆನೇಕಲ್ ಮತ್ತು ಮಹಾಲಕ್ಷ್ಮಿ ಬಡಾವಣೆಯ ಕೇಂದ್ರಗಳಲ್ಲಿ ತರಗತಿಗಳು ಇರುವುದಿಲ್ಲ.**

**12–5–2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಒಂದು ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ಪ್ರಾರಂಭವಾದಾಗ, ಅಲ್ಲಿದ್ದ ಕಾಗೆ ತನ್ನ ಕೂಗನ್ನು ನಿಲ್ಲಿಸಿ ಮೌನಗೊಳ್ಳುತ್ತದೆ. ಮಕ್ಕಳು ಮತ್ತು ಶಿಕ್ಷಕರು ಶಾಂತತೆಯನ್ನು ಅನುಭವಿಸುತ್ತಾರೆ. ಮಕ್ಕಳ ಗ್ರಹಣಶಕ್ತಿ ಉತ್ತಮಗೊಳ್ಳುತ್ತದೆ. ಇವೆಲ್ಲಾ ಬೆಳಕಿನ ಸಂಚಲನವನ್ನು ಸಂಪೂರ್ಣವಾದ ನಂಬಿಕೆ ಮತ್ತು ಪ್ರಾಮಾಣಿಕತೆಯಿಂದ ಸ್ವೀಕರಿಸಿದ ಮಕ್ಕಳ ಮತ್ತು ಶಿಕ್ಷಕರ ನಿಜವಾದ ಅನುಭವಗಳು.
- ಸಮಸ್ತ ಜೀವಜಂತುಗಳು ಮತ್ತು ಪ್ರಕೃತಿ ಸಿದ್ಧಗೊಂಡು ಕಾಯುತ್ತಿದೆ. ಅವೆಲ್ಲಾ ಮಾನವರು ಸಿದ್ಧಗೊಳ್ಳಲು ಕಾಯುತ್ತಿವೆ!
- ನಮ್ಮ ಕಾರ್ಯಕರ್ತರು 2012ರ ಮಾರ್ಚ್ ತಿಂಗಳಲ್ಲಿ ಹೊಸದಾಗಿ 74 ಶಾಲೆಗಳಲ್ಲಿ ಸುಮಾರು 20000 ಕ್ಕೂ ಹೆಚ್ಚು ಮಕ್ಕಳನ್ನು ಲೈಟ್ ಚಾನಲಿಂಗ್‌ಗೆ ಪರಿಚಯಿಸಿರುವುದರಿಂದ, ಈಗ 900ಕ್ಕೂ ಹೆಚ್ಚು ಶಾಲೆಗಳಲ್ಲಿ ಚಾನಲಿಂಗ್ ಕಾರ್ಯಕ್ರಮವು ಕ್ರಮಬದ್ಧವಾಗಿ ಮುಂದುವರೆಯುತ್ತಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ಒಂದು ಶಾಲೆಯಲ್ಲಿ ನಾನು ಲೈಟ್ ಚಾನಲಿಂಗ್ ಬಗ್ಗೆ ವಿವರಣೆ ನೀಡಲು ಪ್ರಾರಂಭಿಸಿದಾಗ, ಕಾಗೆಯೊಂದು ಕಿಟಕಿಯ ಮೂಲಕ ಹಾರಿಬಂದು ಫ್ಯಾನ್ ಮೇಲೆ ಕುಳಿತುಕೊಂಡಿತು. ಅದು ಕಿವಿ ಗಡಚಿಕ್ಕುವಂತೆ ಮತ್ತು ಕರ್ಕಶವಾಗಿ ಕೂಗುತ್ತಿತ್ತು. ಆದರೆ ನಾವು ಚಾನಲಿಂಗ್ ಆರಂಭಿಸಿದಾಗ ಆ ಕಾಗೆ ಮೌನವಾಯಿತು. ಅದು ಕೂಡಾ ಲೈಟ್ ಚಾನಲಿಂಗ್ ಮಾಡುತ್ತಿದೆಯೇನೋ ಎಂದು ಅನಿಸುವಂತಿತ್ತು. ಸೆಷನ್ ನಡೆಯುತ್ತಿದ್ದ ಪೂರ್ತಿ ಸಮಯ ಅದು ಅಲ್ಲಾಡದೆ ಕುಳಿತಿತ್ತು ಮತ್ತು ವಿದ್ಯಾರ್ಥಿಗಳು ಮಾತನಾಡಲಾರಂಭಿಸಿದಾಗ, ನಿಶ್ಶಬ್ದವಾಗಿ ಹೊರಗೆ ಹಾರಿತು.

– ರಾಜಲಕ್ಷ್ಮಿ, ವಾಲಂಟಿಯರ್

ನಾನು ಲೈಟ್ ಚಾನಲ್ ಮಾಡುತ್ತಿದ್ದಾಗ, ನನ್ನ ತರಗತಿಯ ಡೆಸ್ಕ್ ಮತ್ತು ಬೆಂಚ್‌ಗಳು ಬೆಳಕನ್ನು ಹೊರಸೂಸುತ್ತಿದ್ದವು.

– ಓರ್ವ ವಿದ್ಯಾರ್ಥಿ, 4ನೇ ತರಗತಿ, ಕೇಂದ್ರೀಯ ವಿದ್ಯಾಲಯ, ಸದಾಶಿವನಗರ, ಬೆಂಗಳೂರು

ನನ್ನ ತರಗತಿಯ ಮಕ್ಕಳು, ತಮ್ಮ ವಿದ್ಯಾಭ್ಯಾಸದಲ್ಲಿ ಹೆಚ್ಚು ಗಮನವಿಡುತ್ತಿದ್ದಾರೆ ಮತ್ತು ಅವರ ಜ್ಞಾಪಕಶಕ್ತಿ ಕೂಡಾ ಉತ್ತಮಗೊಂಡಿದೆ. ಅವರು ತಮ್ಮ ನೈತಿಕ, ದೈಹಿಕ ಮತ್ತು ಮಾನಸಿಕ ನಡತೆಯನ್ನು ಉತ್ತಮಗೊಳಿಸಿಕೊಂಡಿದ್ದಾರೆ. ಲೈಟ್ ಚಾನಲಿಂಗ್ ಅವರ ಸರ್ವತೋಮುಖ ಬೆಳವಣಿಗೆಗೆ ಸಹಕರಿಸಿದೆ ಎಂದು ನಾನು ಹೇಳಬಲ್ಲೆ.

– ಶ್ರೀಮತಿ ರಂಗನಾಯಕಮ್ಮ ಕೆ.ಎಸ್., ಸಹಾಯಕ ಮುಖ್ಯೋಪಾಧ್ಯಾಯಿನಿ,
ವುಮೆನ್ಸ್ ಪೀಸ್ ಲೀಗ್ ಹೈಯರ್ ಪ್ರೈಮರಿ ಶಾಲೆ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ವರ್ಷ ದೀಪಕ್**

ಅನೇಕ ವರ್ಷಗಳ ಹಿಂದೆ, ಭಗವಾನ್ ಶ್ರೀಕೃಷ್ಣ ಗುರೂಜಿಯವರಿಗೆ ಚಿಕ್ಕಗುಬ್ಬಿ ಗ್ರಾಮದಲ್ಲಿ ತಪೋನಗರವನ್ನು ನಿರ್ಮಿಸುವಂತೆ ಸೂಚನೆ ನೀಡಿದ್ದರು. ಒಂದು ತುಂಡು ಭೂಮಿ, ಹೆಚ್ಚುಕಡಿಮೆ ಬರಿದಾದ ಜೇಬು, ಅಂತರಂಗದ ತುಂಬ ಕನಸುಗಳು, ಮತ್ತು ಅದರಲ್ಲೂ ಅತಿ ಮುಖ್ಯವಾಗಿ ಅಮರರ ಪವಿತ್ರವಾದ ಚಿತಾಭಸ್ಮವನ್ನು ತಮ್ಮಲ್ಲಿ ಇಟ್ಟುಕೊಂಡು ಗುರೂಜಿಯವರು ಋಷಿಗಳ ಈ ತಾಣವನ್ನು ಕಟ್ಟಿದರು. ಗುರೂಜಿಯವರು ಒಂದು ದೈವೀ ಹೊಣೆಗಾರಿಕೆ ಇದ್ದ ಮಾಸ್ಟರ್, ತಮ್ಮಲ್ಲಿದ್ದ ಅಲ್ಪಪ್ರಮಾಣದ ಸಂಪನ್ಮೂಲಗಳಿಂದಾಗಿ ಅವರು ಕಳೆಗುಂದಲಿಲ್ಲ. ಅವರು ತಪೋನಗರವನ್ನು ಧ್ಯಾನದ ತರಗತಿಗಳ ಮೂಲಕ ಕಟ್ಟಲಾರಂಭಿಸಿದರು; ಅವರ ಧ್ಯಾನಶಕ್ತಿಯಿಂದ ಮತ್ತು ಪರಿಶುದ್ಧವಾದ ಮನಸ್ಸಿನಿಂದಾಗಿ ಅತಿ ವಿರಳವಾದ ಕುಂಡಲಿನಿ ಚೈತನ್ಯ, ಕಾಸ್ಮಿಕ್ ಚೈತನ್ಯ ಮತ್ತು 'ರಾ' ಚೈತನ್ಯಗಳಂಥವುಗಳನ್ನು ಇಲ್ಲಿ ಸ್ಥಾಪಿಸಿದ್ದಾರೆ. ಅವರು ಈ ಪ್ರತಿಯೊಂದು ಚೈತನ್ಯಗಳಿಗೂ ಧ್ಯಾನ ಮಂದಿರಗಳನ್ನು ಕಟ್ಟಿಸಿದ್ದಾರೆ. ತಪೋವನವನ್ನು ನಿರ್ಮಾಣ ಮಾಡುವ ಮೂಲಕ ಗುರೂಜಿಯವರು ತಪೋನಗರವನ್ನು ಅಲಂಕರಿಸಿದ್ದಾರೆ ಮತ್ತು ಅವರ ಕೋರಿಕೆಯ ಮೇರೆಗೆ ಸಪ್ತಋಷಿಗಳು ತಮ್ಮ ವೈಯಕ್ತಿಕ ಚೈತನ್ಯಗಳನ್ನು ಎಲ್ಲರಿಗೂ ದೊರಕುವಂತೆ ಮಾಡಿದ್ದಾರೆ. ಅವರು ರಕ್ಷಣೆ ನೀಡುವ ಮಾನಸಿವಲಯವನ್ನು ನಿರ್ಮಿಸಿದ್ದಾರೆ.

ಗುರೂಜಿಯವರ ಹಲವು ವಿದ್ಯಾರ್ಥಿಗಳು ತಪೋನಗರ ನಿವಾಸಿಗಳಾಗಿದ್ದಾರೆ. ಪ್ರತಿಯೊಬ್ಬರ ಗೃಹಪ್ರವೇಶ ಕಾರ್ಯಕ್ರಮದಲ್ಲೂ ಅವರು ಭಾಗವಹಿಸುತ್ತಾರೆ. ನಿರಂತರವಾಗಿ ತಪೋನಗರ ನಿವಾಸಿಗಳ ಸಂಖ್ಯೆ ಹೆಚ್ಚುತ್ತಿದ್ದು, ಗುರೂಜಿಯವರು ಸಮುದಾಯಜೀವನಕ್ಕಾಗಿ ಈ ಸ್ಥಳವನ್ನು ಅಭಿವೃದ್ಧಿಪಡಿಸಿ ಪೋಷಿಸುತ್ತಿದ್ದಾರೆ. ಅದಕ್ಕಾಗಿ ಪ್ರೀತಿ ಮತ್ತು ಇಚ್ಛಾಸ್ವಾತಂತ್ರ್ಯ ಎಂಬ ಮೂಲತತ್ವಗಳನ್ನು ಅವರು ಹಾಕಿಕೊಟ್ಟಿದ್ದಾರೆ. ತಪೋನಗರದ ಪ್ರತಿಯೊಂದು ಇಟ್ಟಿಗೆಯೂ ಗುರೂಜಿಯವರ ಚೈತನ್ಯಗಳಿಂದ ಮಿಡಿಯುತ್ತಿದೆ.

ಗುರೂಜಿಯವರು ಮಾಡುತ್ತಿರುವ ಅತಿ ಮುಖ್ಯವಾದ ಯೋಜನೆಗಳಲ್ಲಿ ಒಂದು, ಅವರ ವಿದ್ಯಾರ್ಥಿಗಳು ಆಗಿದ್ದಾರೆ. ಅವರು ತಪೋನಗರ ನಿವಾಸಿಗಳು ಮತ್ತು ಅನಿವಾಸಿಗಳಿಬ್ಬರನ್ನೂ ಸತತವಾಗಿ ರೂಪಿಸುತ್ತಿದ್ದಾರೆ. ಅವರ ತ್ಯಾಗಗಳಿಂದ ಹಾಗೂ ಕೊನೆಯಿಲ್ಲದ ಪ್ರಯತ್ನಗಳಿಂದಾಗಿ, ವೈಯಕ್ತಿಕ ಮತ್ತು ಜಾಗತಿಕ ಮಟ್ಟಗಳಲ್ಲಿ ಬೆಳಕಿನ ಯುಗದ ಸ್ಥಾಪನೆ ಮುನ್ನಡೆಯನ್ನು ಸಾಧಿಸಿದೆ. ಅವರು ತಮ್ಮ ಕಾರ್ಯ ಸಂಪೂರ್ಣಗೊಳ್ಳುವವರೆಗೆ ನಿಲ್ಲುವುದಿಲ್ಲ ಎಂಬುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ತಪೋನಗರದ ಬಗ್ಗೆ ಅವರು ಕಂಡ ಕನಸಿನಂತೆ ಜೀವಿಸುವುದೇ ನಾವು ಅವರ ಹುಟ್ಟುಹಬ್ಬಕ್ಕೆ ನೀಡಬಹುದಾದ ಏಕಮಾತ್ರ ಉಡುಗೊರೆಯಾಗಿದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)
(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

04-03-2012

ನಮ್ಮನ್ನು ಅತ್ಯುನ್ನತ ಸ್ಥಿತಿಗೆ ಕೊಂಡೊಯ್ಯಲು ಬೆಳಕಿನ ಮಹಾಸಾಗರವನ್ನು ಅನುಭವಿಸುವ ಅಭ್ಯಾಸವೊಂದೇ ಸಾಕು. ಆದರೆ, ನಾವು ಇದನ್ನು ದೀರ್ಘಕಾಲ ಅಭ್ಯಾಸ ಮಾಡಬೇಕು ಮತ್ತು ಮುಖ್ಯವಾಗಿ ಅದರ ಪ್ರಭಾವ ನಮ್ಮ ಮೇಲೆ ಕೆಲಸ ಮಾಡಲು ಅನುಮತಿಸಬೇಕು.

ಪ್ರತಿಯೊಬ್ಬರೂ ಒಂದು ಉನ್ನತ ಆತ್ಮ ಹೊಂದಿದ್ದಾರೆ. ಉನ್ನತ ಆತ್ಮದ ಒಂದು ಭಾಗ ಈಗ ಕೆಳಗಿಳಿಯಲು, ಕಾರ್ಯ ಪ್ರವೃತ್ತವಾಗಲು, ವ್ಯಕ್ತಿಗೆ ಮತ್ತು ಈ ಸುಂದರ ಭೂಮಿಗೆ ಸಹಾಯ ಮಾಡಲು ಬಯಸುತ್ತದೆ. ಇದೊಂದು ಅತ್ಯಂತ ಸುಂದರ ದೈವಿಕ ನಿವೇದನೆ. ನಾವು ಬದಲಾವಣೆಗೊಂಡರೆ, ಭೂಮಿಯ ಮೇಲೆಯೂ ಬದಲಾವಣೆಗಳಾಗುತ್ತವೆ. ಹೀಗಾಗಲು ಯಾಕೋ ನಾವು ಅನುವು ಮಾಡಿಕೊಡುತ್ತಿಲ್ಲ, ಏಕೆಂದರೆ ನಮ್ಮಲ್ಲಿರುವ ಹೆಚ್ಚಿನ ಹೊರೆ ಮತ್ತು ನಕಾರಾತ್ಮಕತೆ ಕಾರಣವಾಗಿದೆ. ಈ ಸನ್ನಿವೇಶಕ್ಕೆ ನಿಮ್ಮನ್ನು ನೀವು ತಿರಸ್ಕರಿಸಬೇಡಿ ಅಥವಾ ದೂಷಿಸಬೇಡಿ. ನಾವು ಮೊದಲು ನಕಾರಾತ್ಮಕತೆಯನ್ನು ಗುರುತಿಸಿ ಅದನ್ನು ಕಿತ್ತೆಸೆಯಬೇಕು. ಅದು ಸುಲಭವಲ್ಲ. ನಾವು ಮೊದಲು ಆ ನಿಟ್ಟಿನಲ್ಲಿ ಪ್ರಯತ್ನವನ್ನು ಪ್ರಾರಂಭಿಸೋಣ.

ನಾವು, ಋಷಿಗಳ ಮಾರ್ಗದಲ್ಲಿ ಇರುವ ಜನ, ಬೆಳಕನ್ನು ಹರಡುವುದರ ಮೂಲಕ ಬೆಳಕಿನ ಆಂದೋಳನವನ್ನು ಉಂಟುಮಾಡಬಹುದು. ಈ ಕ್ರಾಂತಿ ಬಹಳ ಮುಖ್ಯ, ಏಕೆಂದರೆ ಉಳಿದೆಲ್ಲ ಕ್ರಾಂತಿಗಳಿಗೆ ಇದು ಬೆಂಬಲವಾಗುತ್ತದೆ. ಇತ್ತೀಚೆಗೆ ಆರಂಭಗೊಂಡ ಭ್ರಷ್ಟಾಚಾರದ ವಿರುದ್ಧದ ಹೋರಾಟ ಮತ್ತು ಈಜಿಪ್ಟ್‌ನಲ್ಲಿ ಪ್ರಾರಂಭವಾದಂಥ ಹೋರಾಟಗಳು ಇನ್ನೂ ಫಲಗಳನ್ನು ನೀಡಿಲ್ಲ. ಮೊದಲು ನಿಮ್ಮ ಮನೆಗೆ, ನಂತರ ನಿಮ್ಮ ಜನರಿಗೆ, ನಿಮ್ಮ ಪ್ರದೇಶ, ನಂತರ ಇಡೀ ಪ್ರಪಂಚಕ್ಕೆ ಬೆಳಕನ್ನು ಹರಡುವುದರಿಂದ ಆಂದೋಳನ ಈಗ ಪ್ರಾರಂಭವಾಗುತ್ತದೆ. ಮುಖಂಡರಿಗೆ ಮತ್ತು ತೀವ್ರ ಪ್ರಕ್ಷುಬ್ಧತೆ ಇರುವ ಪ್ರದೇಶಗಳಿಗೆ ನಾವು ಬೆಳಕನ್ನು ಕಳುಹಿಸಬಹುದು.

ಸಾಧಕರೊಬ್ಬರು ಧ್ಯಾನಕ್ಕೆ ಕುಳಿತಾಗಲೆಲ್ಲಾ ಅವರ ಮನೆಯ ಮಾಲೀಕರು ಪಂಪ್‌ಸೆಟ್ಟ್‌ನ ಸ್ವಿಚ್ ಆನ್ ಮಾಡುತ್ತಾರೆ ಮತ್ತು ಆಗ ಅದು ಕರ್ಕಶ ಧ್ವನಿ ಮಾಡುತ್ತದೆ ಎಂದು ತಿಳಿಸಿದರು. ಒಂದು ದಿನ ಧ್ಯಾನಕ್ಕೆ ಮೊದಲು ಅವರು ಪ್ರಾರ್ಥನೆ ಮಾಡಿದರೇನೋ, ಇದ್ದಕ್ಕಿದ್ದಂತೆ ಯಾರೋ ಆ ಪಂಪ್‌ಸೆಟ್ಟ್‌ನ ಸ್ವಿಚ್ ಆಫ್ ಮಾಡಿದರು. ಆಗ ಅವರು ದೇವರಿಗೆ ಧನ್ಯವಾದ ಸಲ್ಲಿಸಿದರು. ಇಂತಹ ಸಣ್ಣಸಣ್ಣ ವಿವರಗಳಲ್ಲೂ ವಿಶ್ವ ನಮಗೆ ಸಹಾಯ ಮಾಡುತ್ತದೆ ಎಂಬುದನ್ನು ಗಮನಿಸಲು ನಾವು ಪ್ರಯತ್ನಿಸಬೇಕು.

'ನಮ್ಮ ಸುತ್ತಮುತ್ತ ಇರುವ ಜನರು ಸಂಕಷ್ಟದಲ್ಲಿ ಇರುವುದನ್ನು ನೋಡಿದಾಗ, ನಾವು ಅವರಿಗೆ ಏನು ಮಾಡಲೂ ಸಾಧ್ಯವಿಲ್ಲ. ಪ್ರೀತಿಯನ್ನು ಕಳುಹಿಸಿ; ಅಷ್ಟು ಸಾಕು. ನೀವು ಏನೂ ಮಾಡಲಿಲ್ಲವೆಂದು ತಪ್ಪಿತಸ್ಥ ಭಾವನೆ ಬೇಡ. ಬಹುಶಃ ನಿಮಗೆ ನಿಮ್ಮದೇ ಆದ ಕಾರಣ ಮತ್ತು ಇತಿಮಿತಿಗಳಿವೆ.' ಎಂದು ಅಮರ ಹೇಳಿದ್ದಾರೆ. ಈ ಅಂಶವನ್ನು ಬಹಳ ಮುಖ್ಯವಾಗಿ ಗಮನಿಸಬೇಕು. ಅನುಕಂಪ ತೋರಿಸುವುದು ಒಂದು ಅದ್ಭುತ ಪ್ರಕ್ರಿಯೆ.

ಒಬ್ಬ ವ್ಯಕ್ತಿ ಲೈಟ್ ಚಾನಲಿಂಗ್ ಮಾಡುವಾಗ, ಬೆಳಕು ಕೋಣೆಯಿಂದ ಕೋಣೆಗೆ ಹಾಗೂ ಇಡೀ ಮನೆಗೆ ತುಂಬಿಕೊಳ್ಳುವುದು ಅವರಿಗೆ ಕಾಣಿಸುತ್ತದೆ. ಅದು ಒಳ್ಳೆಯದೇ. ಅವರು ದೇವತೆಗಳೊಂದಿಗೆ ಸಂಪರ್ಕ ಪಡೆಯಲು ಕೂಡಾ ಪ್ರಯತ್ನಿಸುತ್ತಿದ್ದಾರೆ. ಇಂತಹ ಪ್ರಯತ್ನಗಳನ್ನು ಎಂದಿಗೂ ಮಾಡಬೇಡಿ. ಅವರು ಅಲೆಯುವ ಆತ್ಮಗಳನ್ನು ಸಂಪರ್ಕಿಸುತ್ತಿರಬಹುದು, ದೇವತೆಗಳನ್ನಲ್ಲ! ಅವು ಸಮಸ್ಯೆಗಳನ್ನು ಸೃಷ್ಟಿಸುತ್ತವೆ ಮತ್ತು ಅವುಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ನಮಗೆ ಮಾರ್ಗದರ್ಶನ ಮಾಡುವ ಋಷಿಗಳನ್ನು ನಾವು ಸಂಪರ್ಕಿಸಬೇಕು.

11-03-2012

ಒಬ್ಬ ವ್ಯಕ್ತಿ, ತಾನು ಧ್ಯಾನ ಮಾಡುವಾಗಲೆಲ್ಲಾ ಅಮರರ ಸಂಪರ್ಕ ಕಲ್ಪಿಸಿಕೊಳ್ಳುತ್ತೇನೆಂದು ನನಗೆ ತಿಳಿಸಿದರು. ವೈಯಕ್ತಿಕವಾಗಿ ನಾನು ಹೀಗೆ ಮಾಡಬೇಡಿ ಎಂದು ಸಲಹೆ ನೀಡುತ್ತೇನೆ. ಅವರಿಗೆ ನಿಮ್ಮ ಪ್ರೀತಿಯನ್ನು ಕಳುಹಿಸಿ, ಆದರೆ ಅಡಚಣೆ ಮಾಡಬೇಡಿ.

ಒಬ್ಬರು ಧ್ಯಾನಿ ತಮ್ಮ ಒಂದು ಅನುಭವದಲ್ಲಿ, ಮೇ 7ರ 'ಲೈಟ್ ಚಾನಲ್ಸ್ ಮೀಟ್'ನ ಬಗೆಗಿನ ಕಾರ್ಯ ವಿಧಾನಗಳನ್ನು ಮತ್ತು ಅನೇಕ ವಿವರಗಳನ್ನು ಕಂಡರು. ಅದರಲ್ಲಿ ನನಗೆ ಅನೇಕ ಸಂದೇಶಗಳಿವೆ, ಆದರೆ ಋಷಿಗಳು ನನಗೆ ಸಂದೇಶಗಳನ್ನು ಕಳುಹಿಸಲು ಒಂದು ಅನುಭವವನ್ನು ಏಕೆ ಆಯ್ಕೆ ಮಾಡಿಕೊಂಡರು? ಅದು ಅವರ ರೀತಿಯಾಗಿದೆ. ಅವರಲ್ಲಿ ತುಂಟತನವಿದೆ!

ಒಬ್ಬ ವ್ಯಕ್ತಿ ತೆಗೆದ ಛಾಯಾಚಿತ್ರದಲ್ಲಿ ತಪೋವನದ ಒಂದು ಚಕ್ರ ಮಂಟಪದಲ್ಲಿ ಒಂದು ಪ್ರಕಾಶಮಾನ ಬೆಳಕನ್ನು ಕಾಣುತ್ತೇವೆ. ಮಂಟಪಗಳನ್ನು ಮತ್ತು ಅದರ ಕೆಳಗೆ ಸಂಗ್ರಹಿಸಿಟ್ಟಿರುವ ಚೈತನ್ಯಗಳನ್ನು ಬಳಸಿಕೊಳ್ಳಲು ಇದು ನೆನಪಿಸುವಂತಿದೆ. ಸುಲಭವಾಗಿ ಬಂದುದನ್ನು ನಾವು ಅಲಕ್ಷಿಸುತ್ತೇವೆ.

ಒಬ್ಬ ವ್ಯಕ್ತಿ ವಿಶ್ವಚೇತನ ಮಂದಿರಕ್ಕೆ ಹೋದರು. ಆಕೆ ಅಲ್ಲಿಂದ ಹೊರಬಂದಾಗ ಬಾಗಿಲ ಬಳಿ ಜೇನು ಹಾರಾಡುವುದನ್ನು ನೋಡಿ ಬಾಗಿಲನ್ನು ಮುಚ್ಚಿದರು. ಹಿಂದೊಮ್ಮೆ ಜೇನು ಅವರನ್ನು ಮುತ್ತಿ, ಕೆಟ್ಟ ಅನುಭವವಾಗಿತ್ತು. ಆಕೆ ಕುಳಿತು ಪ್ರಾರ್ಥಿಸಿದರು. 5 ನಿಮಿಷಗಳ ನಂತರ ಆಕೆ ಹೊರಬಂದಾಗ ಎಲ್ಲ ಜೇನುಗಳು ಗೂಡಿನಲ್ಲಿ ಕುಳಿತಿದ್ದವು! ಈ ದೈವಕೃಪೆಗೆ ಆಕೆ ರೋಮಾಂಚನಗೊಂಡರು.

ನೀವು ಏನನ್ನಾದರೂ ಒಳ್ಳೆಯದು ಮತ್ತು ಅಮೂಲ್ಯವಾದುದನ್ನು ಪಡೆದರೆ, ನೀವು ಒಂದು ಪರೀಕ್ಷೆಯನ್ನು ಕೂಡಾ ಎದುರಿಸಬೇಕಾಗುತ್ತದೆ, ಅದೊಂದು ಪ್ಯಾಕೇಜ್. ನೀವು ಧ್ಯಾನ ಮಾಡಿದರೆ ಮತ್ತು ಜಾಗರೂಕರಾಗಿದ್ದರೆ ನೀವು ನಕಾರಾತ್ಮಕ ಪರಿಣಾಮವನ್ನು ತಪ್ಪಿಸಿಕೊಳ್ಳುವಿರಿ ಆದರೆ ಕೆಲವು ಸಲ ದೇವರಿಂದ ಕಾಣಿಕೆಯನ್ನು ಪಡೆಯುತ್ತೇವೆ, ಇದು ದೈವಕೃಪೆ. ನೀವು ಇವುಗಳನ್ನೆಲ್ಲಾ ಗಮನಿಸಲು ಪ್ರಾರಂಭಿಸಲೇಬೇಕು. ಎಲ್ಲ ಕಾಣಿಕೆಗಳೂ ದೇವರಿಂದ ಬರುತ್ತವೆ.

ಕೆಲವು ಸಲ ನಮ್ಮ ಹಿಂದಿನ ಮತ್ತು ಭವಿಷ್ಯದ ಬಗ್ಗೆ ಅರಿತಾಗ, ಹಿಂದಿನ ಜೀವನದಿಂದ ಸ್ಫೂರ್ತಿ ಪಡೆದು, ಭವಿಷ್ಯದ ಬಗ್ಗೆ ಪುಳಕಿತರಾಗುತ್ತೇವೆ. ನಾವು ಸಹಜವಾಗಿಯೇ ಬೆಳೆಯಬೇಕು ಮತ್ತು ಪ್ರಸ್ತುತ ಜೀವನವನ್ನು ಕೂಡಾ ಹಿಂದಿನ ಮತ್ತು ಭವಿಷ್ಯತ್ತಿನ ಜೀವನದಷ್ಟೇ ಅದ್ಭುತವಾಗಿಸಲು ಪ್ರಯತ್ನಿಸಬೇಕು. ಇದನ್ನು ಪ್ರಾಮಾಣಿಕವಾಗಿ ಪ್ರಯತ್ನಿಸೋಣ.

ನೀವು ಸೂಕ್ಷ್ಮ ಪ್ರಯಾಣ, ಟೆಲಿಪತಿ ಮತ್ತು ಪ್ರಾಣದ ಮೇಲೆ ಬದುಕಲು ವಿಶೇಷ ಪ್ರಯತ್ನ ಮಾಡಬೇಕಾಗಿಲ್ಲ. ಈ ದೇಹವನ್ನು ಬೆಳಕಿನ ದೇಹವನ್ನಾಗಿ ಮಾಡಲು ಪ್ರಯತ್ನ ಮಾಡಬೇಕಾಗಿಲ್ಲ. ಆತ್ಮದ ಹಂತದಿಂದ ನೀವು ಪ್ರೀತಿಯನ್ನು ಆಯ್ಕೆ ಮಾಡಿದ್ದೀರಾ ಎಂಬುದನ್ನು ಪರೀಕ್ಷಿಸಿಕೊಳ್ಳಿ, ಆಗ ಈ ಎಲ್ಲಾ ವಿಷಯಗಳು ಮತ್ತು ಎಲ್ಲವೂ ತನ್ನಷ್ಟಕ್ಕೆ ತಾನೇ ನಿಮ್ಮ ಬಳಿಗೆ ಬರುತ್ತವೆ. ನಿಮ್ಮ ಪ್ರಯತ್ನ ಮಾಡಿ. ನಿಮಗೆ ತೊಂದರೆಗಳಿದ್ದಲ್ಲಿ ನನ್ನ ಬಳಿಗೆ ಬನ್ನಿ.

ದೇವತೆಗಳೊಂದಿಗೆ ಸಂಪರ್ಕ ಸ್ಥಾಪಿಸುವುದು ಸುಲಭ. ಅವರಿಗೆ ನೀವು ತಿಳಿದಿಲ್ಲ, ಅವರು ನಿಮ್ಮ ಹತ್ತಿರ ಬರದ ಹೊರತು ನಿಮಗೂ ತಿಳಿಯುವುದಿಲ್ಲ. ಆದರೆ ನಿಮ್ಮ ಸುತ್ತಮುತ್ತ ಇರುವ ಮಾನವರೊಂದಿಗೆ ಮೊದಲು ಸಂಪರ್ಕ ಸ್ಥಾಪಿಸುವುದು ಬಹಳ ಮುಖ್ಯ.

ಮೇ 7ರ ಸಮಾರಂಭಕ್ಕೆ ಇತರ ಬೆಳಕಿನ ಕಾರ್ಯಕರ್ತರನ್ನು ಸಂಪರ್ಕಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಅದು ಭೌತಿಕ ಘಟನೆಗಿಂತ, ಹೆಚ್ಚಾಗಿ ಒಂದು ಸೂಕ್ಷ್ಮಮಟ್ಟದ ಘಟನೆ. ಆದರೆ

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಆ ದಿನ ಗರಿಷ್ಠ ಸಂಖ್ಯೆಯಲ್ಲಿ ಜನರು ಲೈಟ್ ಚಾನಲ್ ಮಾಡುವಂತೆ ನಾವು ಪ್ರಯತ್ನಿಸುತ್ತೇವೆ. ನಾನು ನಿಮಗೆ ವಿವರಗಳನ್ನು ತಿಳಿಸುತ್ತೇನೆ.

18–03–2012

ನೀವು ಆಧ್ಯಾತ್ಮಿಕ ವಾಸ್ತವಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಂತೆ, ಇಂದು ಮತ್ತು ಮುಂದೆ ಸಂಭವಿಸುವುದನ್ನು ಅರಿಯಬೇಕು. ಒಬ್ಬ ಆತ್ಮಸಾಕ್ಷಿಯುಳ್ಳ ಮನುಷ್ಯ, ಇಷ್ಟೊಂದು ಅನ್ಯಾಯ, ಭ್ರಷ್ಟಾಚಾರ ಮತ್ತು ಇಂಥ ಎಲ್ಲ ವಿಷಯಗಳಿರುವ ಕಡೆ ತಾನು ಅಪ್ರಸ್ತುತ ಎಂದು ಸ್ವಾಭಾವಿಕವಾಗಿ ಭಾವಿಸುತ್ತಾನೆ. ನಾವು ಬೆಳಕನ್ನು ಹರಡುವುದರ ಹೊರತು ಬೇರೆ ಏನೂ ಮಾಡಲಾರೆವು. ಇಲ್ಲಿನ ಸವಾಲೇನೆಂದರೆ ಈ ಪ್ರಪಂಚದಲ್ಲಿ ನೀವು ಬಾಳಬೇಕು, ಆದರೆ ನೀವು ಸಹಿಸಿಕೊಳ್ಳಲೇಬೇಕೆಂದೇನೂ ಇಲ್ಲ. ನೀವು ಯಾವಾಗಲೂ ಹೋರಾಡಲು ಸಾಧ್ಯವಿಲ್ಲ. ನೀವು ರಾಜಿ ಮಾಡಿಕೊಳ್ಳಬೇಕು. ನಿಮಗೆ ಆಯ್ಕೆಗಳಿಲ್ಲ. ಅಗಾಧ ಪ್ರೀತಿ ಮತ್ತು ಸಹನೆ ಹೊಂದಿರಿ. ನಿಮ್ಮ ಅಂತರಂಗದಲ್ಲಿ ಅನೇಕ ವಿಷಯಗಳು ಸಂಭವಿಸುತ್ತವೆ. ಏಕೆಂದರೆ ಅಲ್ಲಿ ನಾನಾ ಚೈತನ್ಯಗಳು ಲಭ್ಯವಿದೆ; ಒಂದು ರೀತಿಯ ನಿರುತ್ಸಾಹ, ನಿರಾಸೆ ನಿಮ್ಮನ್ನು ಪ್ರವೇಶಿಸಿ ಲೌಕಿಕ ಜೀವನದಿಂದ ಒಂದು ರೀತಿಯ ವೈರಾಗ್ಯದ ಕಡೆಗೆ ಕರೆದೊಯ್ಯಬಹುದು. ಇದನ್ನು ಎಂದಿಗೂ ಮಾಡಬೇಡಿ. ಶೀಘ್ರದಲ್ಲೇ ಇವೆಲ್ಲವೂ ಬದಲಾವಣೆ ಆಗುತ್ತಿರುವುದರಿಂದ, ಭರವಸೆ ಇದೆ. ಅಲ್ಲಿಯವರೆಗೆ ನಿಮ್ಮಲ್ಲಿ ಬೆಳಕನ್ನು ಹೊಂದಿರಿ, ಬೆಳಕನ್ನು ಹರಡಿ. ನೀವು ಬಹಳ ಎಚ್ಚರಿಕೆಯಿಂದ ನಿಮ್ಮ ಲೌಕಿಕ ಜೀವನವನ್ನು ಆಧ್ಯಾತ್ಮಿಕ ಜೀವನಕ್ಕೆ ತೊಂದರೆಯಾಗದಂತೆ ರೂಪಿಸಿಕೊಳ್ಳಬೇಕು.

ನಿದ್ದೆಯನ್ನು ಕಡಿಮೆ ಮಾಡಲು ನಾವು ಧ್ಯಾನವನ್ನು ಹೆಚ್ಚು ಮಾಡಬೇಕು ಮತ್ತು ಶಂಬಲದ ಮೊದಲನೇ ನಿಯಮವನ್ನು ಹೆಚ್ಚು ಅಭ್ಯಾಸ ಮಾಡಬೇಕು ಮತ್ತು ಸ್ವಲ್ಪ ಕಾಲ ಕಾಯಬೇಕು.

ಭವಿಷ್ಯದಲ್ಲಿ, ನಾವು ಎಲ್ಲ ಕಾಲದಲ್ಲಿ ಧ್ಯಾನ ಮಾಡದೇ ಇರಬಹುದು, ಆದರೆ ದೇವರನ್ನು ನಾನಾ ರೀತಿಗಳಿಂದ ಅನುಭವಿಸುತ್ತಿರುತ್ತೇವೆ. ಈಗಿನ ಕಾಲಘಟ್ಟದಿಂದ ಆ ಜೀವನವನ್ನು ಊಹಿಸುವುದು ಬಹಳ ಕಷ್ಟ. ಅದಕ್ಕಾಗಿ ನಾವು ಕಾಯಬೇಕು.

ನೀವು ಒಬ್ಬ ಋಷಿಯಿಂದ ನಿಜವಾದ ಸೂಚನೆಯನ್ನು ಸೂಕ್ಷ್ಮ ಹಂತದಲ್ಲಿ ಪಡೆದರೆ, ಅದನ್ನು ಅನುಸರಿಸಬೇಡಿ. ದಯವಿಟ್ಟು ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ, ಕೆಲವು ಸಲ ನಕಾರಾತ್ಮಕ ಜೀವಿಗಳು ಋಷಿಗಳಂತೆ ಸೋಗು ಹಾಕಿ ಸೂಚನೆ ನೀಡುವುದನ್ನು ನಾನು ನೋಡಿದ್ದೇನೆ.

ಶಂಬಲದ ನಿಯಮಗಳು ಅದ್ಭುತವಾದವು. ಆದರೆ ಅವುಗಳ ಬಗ್ಗೆ ಎಲ್ಲಾ ಸನ್ನಿವೇಶದಲ್ಲಿ, ಎಲ್ಲಾ ಕಡೆ ಮಾತನಾಡಬಾರದು. ಜನಗಳು ಆಲಿಸಲು ಮನಸ್ಸು ಮಾಡದೇ ಇದ್ದಾಗ ಅವುಗಳ ಬಗ್ಗೆ ಮಾತನಾಡಬಾರದು.

ವಿನಯ ಅಂತಃಕರಣದಿಂದ ಮೂಡಿ ಬರಬೇಕು. ನೀವು ವಿನೀತರಾಗಲು ಬಯಸುವುದಿಲ್ಲ, ಆದರೆ ನಿಮ್ಮನ್ನು ವಿನೀತರನ್ನಾಗಿ ಮಾಡಲು ನನ್ನನ್ನು ಕೇಳುವಿರಿ. ನಮ್ಮನ್ನು ನಾವು ಮೂರ್ಖರನ್ನಾಗಿ ಮಾಡಿಕೊಂಡು, ಹೇಗೋ ನಾವು ನಮ್ಮೊಳಗೆ ಇಂತಹ ನಾಟಕವನ್ನಾಡುತ್ತೇವೆ. ನೀವು ಪ್ರಾಮಾಣಿಕರಾಗಿರಿ ಮತ್ತು ನಿಮ್ಮ ಕೊರತೆಗಳನ್ನು ಒಪ್ಪಿಕೊಳ್ಳಿ.

ಕೆಲವು ಸಲ ನೀವು ಹತಾಶರಾದಾಗ, ದೂರುವ ಅಥವಾ ಗೊಣಗುವ ಬದಲು, ಭೌತಿಕ ನೆಲೆಯಲ್ಲಿ ಆ ಸನ್ನಿವೇಶವನ್ನು ಎದುರಿಸಿ. ನೀವು ನಿಮ್ಮದೇ ರೀತಿಯಲ್ಲಿ ಯೋಜನೆಯನ್ನು ಹಾಕಿಕೊಳ್ಳಬೇಕು. ಅದು ಸಾಧ್ಯವಿದೆ. ಎಂದಿಗೂ ಭರವಸೆಯನ್ನು ಕಳೆದುಕೊಳ್ಳಬೇಡಿ. ನಾವು ನಿಮ್ಮೊಡನೆ ಇದ್ದೇವೆ.

ನೀವು ಶಂಬಲ ತರಗತಿಗೆ ಬರಲು ಆಗದಿರುವುದನ್ನು ತಿಳಿಸದೇ ಹೋದರೆ, ಈ ಗ್ರೂಪ್‌ನಿಂದ ನಿಮ್ಮನ್ನು ತೆಗೆದು ಹಾಕಲಾಗುತ್ತದೆ.

25–03–2012

ಹೀಲಿಂಗ್ ಮಾಡುವಾಗ, ನಮ್ಮ ಸ್ವಂತ ಕರ್ಮಗಳು ಅಡ್ಡಬಂದಲ್ಲಿ ನಾವು ಬಿಡದೆ ಮುಂದುವರೆಸಬೇಕು. ನಾವು ಕರ್ಮಗಳನ್ನು ಸಹಕರಿಸುವಂತೆ ಕೂಡ ಕೇಳಿಕೊಳ್ಳಬೇಕು. "ಕಾಯಿಲೆಯಿಂದ, ನೋವಿನಿಂದ ಗುಣಮುಖವಾಗಲು, ತೊಂದರೆಯಾಗಿರುವ ಭಾಗಕ್ಕೆ ಬೆಳಕನ್ನು ಕೊಂಡೊಯ್ಯಲು ದಯವಿಟ್ಟು ಸಹಾಯ ಮಾಡಿ" ಎಂದು ಅವುಗಳಿಗೆ ಹೇಳಬೇಕು. ಕರ್ಮಗಳು ಸಹಕರಿಸುತ್ತವೆ. ಶಾರೀರಿಕ ವ್ಯವಸ್ಥೆಯೊಂದಿಗೆ ಮಾತನಾಡಿ. ಪ್ರೀತಿಯಿಂದ ಅದನ್ನು ಸಮೀಪಿಸಿ, ಶಾರೀರಿಕ ವ್ಯವಸ್ಥೆಯಲ್ಲಿನ ಪ್ರತಿಯೊಂದು ಅಸ್ತಿತ್ವ ಸಹಕರಿಸುತ್ತವೆ.

ಒಬ್ಬ ಮಹಿಳೆ ಬೆಳಕನ್ನು ಹರಡುತ್ತಿದ್ದಾಗ ಬೆಳಕನ್ನು ನೋಡಿದ ಅನುಭವ, ನಿಜಕ್ಕೂ ಕೇಳಲು ಅದ್ಭುತ. ಯಾವುದೇ ಅಭ್ಯಾಸ, ಪ್ರಯತ್ನ ಮತ್ತು ಸಂಬಂಧಗಳಿಗೆ ಪ್ರೀತಿಯನ್ನು ಸೇರಿಸಿ, ಆಗ ನೀವು ಅದ್ಭುತ ಫಲಗಳನ್ನು ನೋಡುತ್ತೀರಿ. ಇಂಥ ಸಂದರ್ಭಗಳು ನಮ್ಮನ್ನೆಲ್ಲ ಬಹಳ ಸಂತೋಷ ಪಡಿಸುತ್ತವೆ.

ಅನಾರೋಗ್ಯದಿಂದ ಕೂಡಿದ ವ್ಯಕ್ತಿಗೆ ಬೆಳಕನ್ನು ಕಳಿಸಲು ಪ್ರಾರಂಭಿಸಿರುವುದಾಗಿ ಒಬ್ಬ ಮಹಿಳೆ ತನ್ನ ಮೇಲ್‌ನಲ್ಲಿ ಬರೆದರು. ಇಂತಹ ವಿಷಯಗಳಲ್ಲಿ ನಂಬಿಕೆಯಿಲ್ಲದ ಆಕೆಯ ಹಿರಿಯರು ಮೌನವಾಗಿ ಆಕೆಯನ್ನು ಅನುಸರಿಸಿದರು. ಪ್ರೀತಿಯಿರುವ ಕಡೆ ಎಲ್ಲವೂ ಸಂಭವಿಸುತ್ತವೆ. ಧ್ಯಾನವನ್ನು ಇತ್ತೀಚೆಗೆ ತೆಗೆದುಕೊಂಡ ವ್ಯಕ್ತಿ ಇಂತಹ ಅದ್ಭುತ ಅನುಭವಗಳನ್ನು ಪಡೆದಿದ್ದಾರೆ. ಅದು ಪ್ರಯತ್ನ ಅಥವಾ ಬಳಸುವಿಕೆಯ ಗಾಢತೆಯನ್ನು ಅವಲಂಬಿಸಿರುತ್ತದೆ.

ಮೇ 7ರಂದು ಬೆಳಕಿನ ಚಾನಲ್‌ಗಳ ಸಮಾವೇಶವಿದೆ. ಹೆಚ್ಚಿನ ವಿವರಗಳನ್ನು ನಾವು ನಿಮಗೆ ನೀಡುತ್ತೇವೆ. ಅದರ ಬಗ್ಗೆ ಕಾರ್ಯಪ್ರವೃತ್ತರಾಗಿದ್ದೇವೆ. ಈ ಕಾರ್ಯದಲ್ಲಿ ಪ್ರಪಂಚದಾದ್ಯಂತ ಕೋಟಿಗಟ್ಟಲೆ ಜನರು ಎಲ್ಲಿದ್ದರೂ ಅಲ್ಲಿಂದಲೇ ಆ ದಿನ ರಾತ್ರಿ 7.45ರಿಂದ 8.00 ಗಂಟೆಯವರೆಗೆ (ಸ್ಥಳೀಯ ಕಾಲ) ಲೈಟ್ ಚಾನಲ್ ಮಾಡುವುದರ ಮೂಲಕ ಭಾಗವಹಿಸಲು ಬಯಸುತ್ತೇವೆ. ಹಿಂದೆ ಇಂಥ ಕಾರ್ಯಕ್ರಮವನ್ನು ಕೋರಮಂಗಲ ಕ್ರೀಡಾಂಗಣದಲ್ಲಿ ಮಾಡಲಾಗಿತ್ತು. ಅದರ ಮುಂದುವರಿದ ಭಾಗವೇ ಇದು ಮತ್ತು ನಾವು ಈ 'ಬೆಳಕಿನಿಂದ ಕ್ರಾಂತಿ'ಯನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಬಯಸುತ್ತೇವೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಕೇವಲ ಭಾಗವಹಿಸುವುದಲ್ಲದೆ ಈ ಸಂದೇಶವನ್ನು ಹರಡಲು ಎಲ್ಲಾ ಪ್ರಯತ್ನಗಳನ್ನು ಮಾಡಿ. ಅದು ಸಂಪೂರ್ಣ ಮತ್ತು ಕೊನೆಯ ಕ್ರಾಂತಿ. ಈ ಕ್ರಾಂತಿಯ ನಂತರ ನಾವು ಹೊಸ ಯುಗವನ್ನು ಪಡೆಯುತ್ತೇವೆ.

ನಾವು ಋಷಿಗಳಡಿ ಕೆಲಸ ಮಾಡಲು, ಬೆಳಕಿನ ಈ ಕ್ರಾಂತಿಯನ್ನು ಪ್ರಾರಂಭಿಸಲು, ಹೊಸಯುಗವನ್ನು ತರಲು ಸೇರಿದ್ದೇವೆ; ಇಡೀ ಭೂಮಿಯನ್ನು, ಭೂಮಿಯ ಮೇಲಿರುವ ಎಲ್ಲ ಜೀವಿಗಳನ್ನು, ಎಲ್ಲ ಮಾನವರನ್ನು ಹೊಸಯುಗಕ್ಕೆ ಕರೆದೊಯ್ಯಲು ಸೇರಿದ್ದೇವೆ. ಇದು ನಮ್ಮ ಕೆಲಸ. ಅದಕ್ಕಾಗಿಯೇ ಇದನ್ನು ನಾವು ಅತ್ಯಂತ ಪರವಶತೆಯಿಂದ ಕೈಗೊಳ್ಳಬೇಕು.

2012ರ ಜನವರಿ 1ರಂದು ಮತ್ತು ಪುನಃ 23ರಂದು ಯುಗಾದಿಯ ದಿನ, ಚೈತನ್ಯಗಳನ್ನು ಬಿಡುಗಡೆ ಮಾಡಲಾಗಿತ್ತು. ಈ ಎಲ್ಲ ಚೈತನ್ಯಗಳು ಒಂದನ್ನೊಂದು ಬೆಂಬಲಿಸುತ್ತವೆ. ಜಾಗೃತಿ ಒಂದು ನಿರಂತರ ಪ್ರಕ್ರಿಯೆ ಆಗಿರುವುದರಿಂದ, ಆತ್ಮದ ಹಂತದಲ್ಲಿ ಹೆಚ್ಚಿನ ಜಾಗೃತಿಗಳಾಗುತ್ತವೆ. ಹೆಚ್ಚಿನ ಜಾಗೃತಿ, ಹೆಚ್ಚಿನ ಪ್ರೀತಿ ಉಂಟಾಗುತ್ತವೆ. ಶೀಘ್ರವಾಗಿ ಬದಲಾಗಲು ಹೆಚ್ಚಿನ ಅವಕಾಶಗಳು ಸಿಗುತ್ತವೆ. ನಾವು ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ – ಮನುಕುಲದ ಬೆಳಕು

**ಶ್ಯಾಮಲಾದೇವಿ**

ಗುರೂಜಿಯವರು ಒಂದು ಮಹಾನ್ ಧ್ಯೇಯದೊಂದಿಗೆ ಇಲ್ಲಿಗೆ ಬಂದರು. ಅದು ಈ ಭೂಮಿಯ ಮೇಲೆ ಋಷಿ–ಕೇಂದ್ರವನ್ನು ಸ್ಥಾಪಿಸಿ, ಮನುಕುಲವನ್ನು ಹೊಸಯುಗಕ್ಕೆ ಮಾರ್ಗದರ್ಶಿಸುವುದು. ಅವರಿಗೆ ಅನೇಕ ಜವಾಬ್ದಾರಿಗಳಿವೆ – ಉನ್ನತ ವಲಯಗಳಿಂದ ಪರಿಶುದ್ಧ ಜ್ಞಾನವನ್ನು ಮತ್ತು ಕಾಲಕಾಲಕ್ಕೆ ಅಗತ್ಯವಿರುವ ಚೈತನ್ಯಗಳನ್ನು ಈ ಮಟ್ಟಕ್ಕೆ ತರುವುದು, ಕಾಲ ಸರಿದಂತೆ ವಿಕೃತಗೊಂಡಿರುವ ಜ್ಞಾನವನ್ನು ಸರಿಯಾಗಿ ಅರ್ಥೈಸುವುದು, ಪ್ರಳಯದ ಅವಧಿಯನ್ನು ಮತ್ತು 2012ನ್ನು ದಾಟಿಹೋಗಲು ಜನರಿಗೆ ಶಿಕ್ಷಣ ನೀಡುವುದು, ಇತ್ಯಾದಿ.

ಪ್ರತಿಯೊಂದು ಯುಗಚಕ್ರದಲ್ಲಿ 51000 ವರ್ಷಗಳಿಗೊಮ್ಮೆ ಪ್ರಾರಂಭವಾಗುವ, ಜನರನ್ನು ಮಾರ್ಗದರ್ಶಿಸುವ ಈ ಕೆಲಸ ಅಗಾಧವಾದುದು, ಯಾರ ಊಹೆಗೂ ನಿಲುಕದ್ದು. ಈ ಕೆಲಸ ಮಾಡಲು ಜನ್ಮಾಂತರಗಳ ತಯಾರಿ ಮತ್ತು ತರಬೇತಿ ಬೇಕು. ಅಂಥ ಭದ್ರಬುನಾದಿ ಹೊಂದಿದ್ದರೂ, ಋಷಿಗಳ ಕೇಂದ್ರವನ್ನು ಕಟ್ಟಿಬೆಳೆಸಲು ಗುರೂಜಿಯವರು ವಿಷಮ ಪರೀಕ್ಷೆಗಳು ಮತ್ತು ಯಾತನೆಗಳನ್ನು ಅನುಭವಿಸಬೇಕಾಯಿತು. "ಋಷಿಗಳಲ್ಲಿ ಮತ್ತು ಕೆಲಸದಲ್ಲಿ ನನಗಿರುವ ಅಚಲ ನಿಷ್ಠೆಯನ್ನು ಪರೀಕ್ಷಿಸುವುದಕ್ಕಾಗಿ ಋಷಿಗಳು ಅವೆಲ್ಲವನ್ನೂ ಆಗಗೊಟ್ಟರು" ಎಂದು ಗುರೂಜಿಯವರು ಹೇಳುತ್ತಾರೆ.

ಸೂಕ್ಷ್ಮವಲಯಗಳಲ್ಲಿ ಕೆಲಸಮಾಡಲು ಗುರೂಜಿಯವರು ಆಯ್ಕೆಯಾದರು. ಇತರ ಮಟ್ಟಗಳಲ್ಲಿ ಕೆಲಸಮಾಡುತ್ತ, ಈ ಮಟ್ಟದಲ್ಲಿ ಧ್ಯಾನದ ಬಗ್ಗೆ ಜನರಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುತ್ತ, ಈ ಜೀವನವನ್ನು ಸಂಪೂರ್ಣವಾಗಿ ಬದುಕುತ್ತ, ಅವರು ಋಷಿತ್ವದಲ್ಲಿ ಬಹಳ ಉನ್ನತ ಮಟ್ಟವನ್ನು ತಲುಪಿದರು.

ಬೆಳಕಿನ ಮಾಸ್ಟರ್ ಆಗಿರುವ ಗುರೂಜಿಯವರು, ತಮ್ಮ ಮಹಾನ್ ಧ್ಯೇಯದ ಭಾಗವಾಗಿ, ಇಡೀ ಭೂಮಿಯನ್ನು ಬೆಳಕಿನಿಂದ ತುಂಬುವ ಅಗತ್ಯದ ಬಗ್ಗೆ ಯಾರಾದರೂ ಮಾತನಾಡುವ ಮೊದಲೇ, ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು 2008ರಲ್ಲಿ ಲಾಂಚ್ ಮಾಡಿದರು. ಮಾನವರ ಒಳಿತಿಗಾಗಿ, ಆಯಾಸವನ್ನೂ ಲೆಕ್ಕಿಸದೆ ಹಗಲಿರುಳೂ ದುಡಿಯುವ ಒಬ್ಬ ನಿಜವಾದ ಮಾಸ್ಟರ್‌ಗೆ ಮಾತ್ರ ಯಾವುದನ್ನು ಯಾವಾಗ ಕೊಡಬೇಕು ಎಂಬುದು ಗೊತ್ತು. ಗುರೂಜಿಯವರು ಈ ಪ್ರಪಂಚದ ಭರವಸೆ ಆಗಿದ್ದಾರೆ. ಗುರೂಜಿಯವರು ಮನುಕುಲದ ಮಾರ್ಗದರ್ಶಿ– ಬೆಳಕು ಆಗಿದ್ದಾರೆ. ■

## ಗುರೂಜಿ

**ಜಯಂತ್ ದೇಶ್‌ಪಾಂಡೆ; ಅನು: ಶ್ಯಾಮಲಾ ದೇವಿ**

ಗುರೂಜಿಯವರ ಜೀವನ, ಅವರ ಹೋರಾಟಗಳು, ಅವರು ಎದುರಿಸಿದ ಅಪಮಾನಗಳ ಬಗ್ಗೆ ನಾನು ಚಿಂತನೆ ಮಾಡುತ್ತಿದ್ದಾಗ, ಅವೆಲ್ಲವನ್ನೂ ಅವರು ಏಕೆ ಅನುಭವಿಸಬೇಕಾಗಿ ಬಂತು ಎಂದು ನಾನು ಆಶ್ಚರ್ಯಗೊಂಡೆ. ಈ ಪ್ರಪಂಚದಲ್ಲಿ ಜನ್ಮತಾಳುವುದರಿಂದ ಅಷ್ಟೊಂದು ನೋವನ್ನು ಅನುಭವಿಸಬೇಕು ಎಂಬುದು ಗೊತ್ತಿದ್ದೂ, ಅವರು ಏಕೆ ಜನ್ಮತಾಳಿದರು. ಗುರೂಜಿಯವರಂಥ ಮಾಸ್ಟರ್‌ಗಳು, ಇಲ್ಲಿ ಸಿಕ್ಕಿಹಾಕಿಕೊಂಡಿರುವ ಆತ್ಮಗಳಾದ ನಮಗಾಗಿ ಜನ್ಮತಾಳುತ್ತಾರೆ. ದೇವರು, ಅವನ ಸೃಷ್ಟಿ ಮತ್ತು ಇಲ್ಲಿ ಸಿಕ್ಕಿಹಾಕಿಕೊಂಡಿರುವ ಆತ್ಮಗಳಿಗಾಗಿ ಅವರು ಹೊಂದಿರುವ ಪ್ರೀತಿಯ ಆಳವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಈ ಆತ್ಮಗಳಿಗೆ ಯಾರಾದರೊಬ್ಬರು ಸಹಾಯಮಾಡಬೇಕು ಮತ್ತು ಈ ಜನರು ತಮ್ಮ ಪ್ರೀತಿಯನ್ನು ಪೂರ್ಣವಾಗಿ ಅರಿಯಲಾರರು, ಪ್ರತಿಸ್ಪಂದಿಸಲಾರರು ಎಂಬುದು ಗೊತ್ತಿದ್ದೂ, ಗುರೂಜಿಯವರಂಥ ಮಾಸ್ಟರ್‌ಗಳು ಸ್ವ–ಇಚ್ಛೆಯಿಂದ ಇಲ್ಲಿ ಜನ್ಮತಾಳುತ್ತಾರೆ.

ಒಮ್ಮೆ ಒಬ್ಬ ಮಹಾನ್ ಬರಹಗಾರ ಹೇಳಿದರು – ನನ್ನ ಹೃದಯಾಂತರಾಳದಿಂದ ನಾನು ಬರೆಯುತ್ತೇನೆ. ಜನ ನನ್ನ ಬರವಣಿಗೆಗಳಿಗೆ ಸಂವೇದಿಸದಿದ್ದಾಗ, ನನಗೆ ನೋವಾಗುತ್ತದೆ. ಗುರೂಜಿಯವರು ಮಾನಸವನ್ನು ತಮ್ಮ ಆತ್ಮದ ಚೈತನ್ಯಗಳಿಂದ ನಿರ್ಮಾಣ ಮಾಡಿದ್ದಾರೆ. ಮಾನಸದ ಪ್ರತಿಯೊಂದು ಅಂಗವನ್ನು ನಿರ್ಮಾಣ ಮಾಡುವಲ್ಲಿ ತಮ್ಮ ಆತ್ಮದ ಅಖಂಡ ಪ್ರೀತಿಯನ್ನು ಧಾರೆಯೆರೆದಿದ್ದಾರೆ. ಮಾನಸದ ಪ್ರತಿಯೊಂದು ಚಿಕ್ಕ ಅಂಶದ ಮುಖಾಂತರ ಗುರೂಜಿಯವರ ಆತ್ಮ ಪ್ರಕಾಶಿಸುತ್ತದೆ. ಗುರೂಜಿಯವರು ನೀಡುವ ಜ್ಞಾನಕ್ಕೆ, ಅವರು ತಮ್ಮದೇ ಆದ ಸ್ವಂತಿಕೆಯ ಸ್ಪರ್ಶ ಕೊಡುತ್ತಾರೆ. ಇಲ್ಲಿರುವ ಚೈತನ್ಯಗಳ ಅಧಿದೇವತೆಗಳು, ಗುರೂಜಿಯವರ ಬಗ್ಗೆ ತಮಗಿರುವ ಪ್ರೀತಿಯಿಂದಾಗಿ ಇಲ್ಲಿದ್ದಾರೆ. ಜನರು ಇಲ್ಲಿರುವುದು ಕೂಡ ಗುರೂಜಿಯವರ ಬಗ್ಗೆ ತಮಗಿರುವ ಪ್ರೀತಿಯಿಂದಾಗಿಯೇ.

ತಮ್ಮ ಚೈತನ್ಯಗಳಿಗೆ ಸ್ಪಂದಿಸಿ, ಬೆಳೆಯುತ್ತಿರುವ ಜನರನ್ನು ನೋಡಿ ಗುರೂಜಿಯವರಿಗೆ ಸಂತೃಪ್ತಿ ಇರಬೇಕು, ಹಾಗೆಯೇ ಅವುಗಳಿಗೆ ಸ್ಪಂದಿಸದೆ, ಕಷ್ಟಪಡುತ್ತಿರುವ ಜನರನ್ನು ನೋಡಿ ಅವರಿಗೆ ದುಃಖವೂ ಇರಬೇಕು. ಆದರೆ ಆ ಜನರಿಗೆ ಅವಕಾಶಗಳ ಮೇಲೆ ಅವಕಾಶಗಳನ್ನು ನೀಡುತ್ತ, ಅವರು ಸದಾ ಆಶಾಭಾವನೆ ಹೊಂದಿರುತ್ತಾರೆ. ಅಪರಿಪೂರ್ಣ ಆತ್ಮಗಳಿಗಾಗಿ ಅವರು ಯಾವಾಗಲೂ ಕೆಲಸ ಮಾಡಬೇಕು. ಹೀಗಾಗಿ ಅವರ ಕೆಲಸ ನಿರಂತರವಾದ ಒಂದು ಸವಾಲಾಗಿಯೇ ಉಳಿದಿದೆ. ■

## ಗುರೂಜಿ

**ಅಪೂರ್ವ ದೇಶ್‌ಪಾಂಡೆ; ಅನು: ಸುಧಾಕರ್**

ನನ್ನ ಲ್ಯಾಪ್‌ಟಾಪ್ ಮೇಲಿನ ಕರ್ಸರ್ ಒಂದೇ ಸಮನೆ ಮಿಟುಕುತ್ತಿರುವುದು, ನಾನು ಟೈಪ್ ಮಾಡಲು ಪ್ರಾರಂಭಿಸುವುದಕ್ಕಾಗಿ ನನ್ನನ್ನು ಮೆಲ್ಲಗೆ ಪುಸಲಾಯಿಸಲು ಎನ್ನುವಂತಿದೆ! ಆದರೆ ನನಗೆ ಪದಗಳು ಸಿಗುತ್ತಿಲ್ಲ. ನಮ್ಮೆಲ್ಲರ ಜೀವನದಲ್ಲಿನ ಪವಾಡವೇನೋ ಎನ್ನುವಂತಹ ಅಪೂರ್ವ ವ್ಯಕ್ತಿಯನ್ನು ವರ್ಣಿಸುವ ಜವಾಬ್ದಾರಿಯ ಭಾರ ನನ್ನಲ್ಲಿ ಕಾಣಿಸಿಕೊಂಡಿತು. ಏನೂ ತೋಚದೆ ಟಿ.ವಿ.ಯನ್ನು ಹಾಕಿದೆ, ಬಾಬಾ ಒಬ್ಬರು ಪ್ರವಚನ ನೀಡುತ್ತಿರುವುದನ್ನು ನೋಡಿದೆ. ಅಲ್ಲಿ ಬೃಹತ್ತಾದ ವೇದಿಕೆ ಮತ್ತು ತಡೆಗಟ್ಟುಗಳು ಇವೆ ಮತ್ತು ಪೋಲೀಸರು ಅತಿ ಎಚ್ಚರಿಕೆಯಿಂದ ಬಾಬಾರನ್ನು ಕಾಯುತ್ತಿದ್ದಾರೆ. ಬಾಬಾರವರು ಅವರ ಅನುಯಾಯಿಗಳಿಂದ 100 ಅಡಿ ದೂರದಿಂದಾಚೆ ಕುಳಿತಿದ್ದಾರೆ. ನನ್ನ ಮನಸ್ಸಿಗೆ ಬಂದ ಮೊದಲ ಆಲೋಚನೆಯೆಂದರೆ ಬಾಬಾರವರು ಅವರ ಅನುಯಾಯಿಗಳಿಂದ ಎಷ್ಟು ದೂರ ಉಳಿದಿದ್ದಾರೆ ಎಂದು! ಅವರು ಆಧ್ಯಾತ್ಮಿಕವಾಗಿ, ಭೌತಿಕವಾಗಿ ಮತ್ತು ಇನ್ನೆಲ್ಲ ಮಟ್ಟಗಳಲ್ಲೂ ದೂರವುಳಿದಿದ್ದಾರೆ.

ಮಾನಸದಲ್ಲಿನ ಚಿತ್ರಣ ಪೂರ್ಣವಾಗಿ ಬೇರೆಯೇ ಇದೆ. ನಮ್ಮ ಪ್ರೀತಿಯ ಗುರೂಜಿಯವರ ದರ್ಶನವನ್ನು ಪಡೆಯಲು ನಾವು, ನಮ್ಮ ಕುತ್ತಿಗೆಗಳನ್ನು ಉದ್ದಮಾಡಿ ನಿಲ್ಲಬೇಕಾಗಿಲ್ಲ ಅಥವಾ ರಣ ಬಿಸಿಲಿನಲ್ಲಿ ಕೂರಬೇಕಾಗಿಲ್ಲ. ಪ್ರಖ್ಯಾತಿಯ ತೋರಿಕೆ ಗುರೂಜಿಯವರಲ್ಲಿಲ್ಲ. ನಾನು ಸಣ್ಣ ಹುಡುಗಿಯಾಗಿದ್ದಾಗ, ಅವರು ದೊಡ್ಡವರ ಪ್ರಶ್ನೆಗಳಿಗೆ ಎಷ್ಟು ಗಮನ ಹರಿಸುತ್ತಿದ್ದರೋ ಅಷ್ಟೇ ಗಮನವನ್ನು ನನ್ನ ಬಾಲಿಶ ಪ್ರಶ್ನೆಗಳಿಗೂ ಕೊಡುತ್ತಿದ್ದುದು ನನಗೆ ನೆನಪಿದೆ. ನನ್ನ ಪ್ರಶ್ನೆಗಳನ್ನು ಎಂದೂ ತೃಣೀಕರಿಸದಿದ್ದುದು ಅವರ ದೊಡ್ಡತನವನ್ನು ತೋರಿಸುತ್ತದೆ.

ಒಂದು ವ್ಯಕ್ತಿಯ ಸಣ್ಣಪುಟ್ಟ ನಡೆ–ನುಡಿಗಳು ಆ ವ್ಯಕ್ತಿಯ ಬಗ್ಗೆ ಬಹಳಷ್ಟನ್ನು ತಿಳಿಸುತ್ತವೆ ಎಂದು ಗುರೂಜಿಯವರು ಪದೇಪದೇ ಹೇಳುತ್ತಾರೆ. ಜೀವನದ ಪ್ರತಿ ಸಣ್ಣ ವಿಷಯಗಳಲ್ಲೂ ಗುರೂಜಿಯವರು ಪರಿಪೂರ್ಣ. ಅವರ ಪ್ರತಿಯೊಂದು ನಡೆ, ಬಳಸುವ ಪ್ರತಿಯೊಂದು ಪದಗಳಲ್ಲಿ ಎಷ್ಟೊಂದು ನವಿರತೆ ಮತ್ತು ಪ್ರೀತಿಯಿರುತ್ತದೆ! ಒಬ್ಬ ತಾಯಿಯ ರೀತಿಯಲ್ಲಿಯೇ ಗುರೂಜಿಯವರು ನಮ್ಮನ್ನು ಪೋಷಿಸುತ್ತಾರೆ. ಕೆಲವೊಮ್ಮೆ ಅವರು ನಮ್ಮೊಂದಿಗೆ ಬಿಗಿಧೋರಣೆ ತೋರಿದರೂ ಅದರ ಹಿಂದೆ ಅಪಾರವಾದ ಪ್ರೀತಿ ಮತ್ತು ಪರಿಶುದ್ಧ ಕಾಳಜಿ ಇರುತ್ತದೆ. ನಾವು ನಮ್ಮ ನಡತೆಗಳಿಂದ ಗುರೂಜಿಯವರನ್ನು ಸಂಪೂರ್ಣವಾಗಿ ನಿರಾಶೆಗೊಳಿಸಿದ ಉದಾಹರಣೆಗಳಿವೆ, ಆದರೆ ಅವರು ಎಂದಿಗೂ ನಮ್ಮ ಕೈ ಬಿಟ್ಟಿಲ್ಲ. ಗುರೂಜಿಯವರಂಥ ಉನ್ನತ ವ್ಯಕ್ತಿ ನಮ್ಮ ಪ್ರತಿಯೊಂದು ಹೆಜ್ಜೆಗೂ ಆಧಾರವಾಗುತ್ತಾ ನಮ್ಮೊಡನೆ ನಡೆಯಲು ಆಯ್ಕೆಮಾಡುತ್ತಾರೆ, ನಾವು ಕೆಳಗೆ ಬಿದ್ದಾಗ ಮೇಲೆತ್ತುತ್ತಾರೆ. ಇದಕ್ಕೆ ಕಾರಣ, ನಾವು ಬೆಳೆದು ಉನ್ನತ ಮಟ್ಟ ಮುಟ್ಟುವುದನ್ನು ನೋಡುವುದೇ ಅವರ ಉದ್ದೇಶವಾಗಿರುವುದು. ■

## ಗುರೂಜಿ

**ಸುನೀತ ದೇಶ್‌ಪಾಂಡೆ; ಅನು: ಶ್ಯಾಮಲಾ ದೇವಿ**

ಜನರು ತಮ್ಮ ಅಭಿಪ್ರಾಯ, ನಡತೆ ಮತ್ತು ಸ್ವಭಾವಗಳನ್ನು ಬದಲಿಸುವುದನ್ನು ನಾನು ನೋಡಿದ್ದೇನೆ. ಋತುಗಳು ಬದಲಾಗುವುದನ್ನು, ವಸ್ತುಗಳು ನಿರುಪಯೋಗಿಯಾಗುವುದನ್ನು, ಸನ್ನಿವೇಶಗಳು ಬದಲಾಗುವುದನ್ನು ನಾನು ನೋಡಿದ್ದೇನೆ. ಆದರೆ, ನಾನು ವರ್ಷಗಳ ಹಿಂದೆ ಮೊಟ್ಟಮೊದಲ ಬಾರಿಗೆ ನೋಡಿದ ಆ ವ್ಯಕ್ತಿ, ಅಂದಿನಷ್ಟೇ ಉತ್ಸಾಹ, ಪ್ರೀತಿ, ತಾಳ್ಮೆ ಮತ್ತು ಸಹನೆಗಳಿಂದ ತುಂಬಿರುವುದನ್ನು ಇಂದಿಗೂ ನೋಡುತ್ತಿದ್ದೇನೆ. ಅದೇ ಪ್ರೀತಿ ಮತ್ತು ಉತ್ಸಾಹದಿಂದ ಇಂದೂ ಕೂಡ ಮಾರ್ಗದರ್ಶಿಸುತ್ತಾರೆ. ಅವರೇ ನಮ್ಮ ಗುರೂಜಿ!

ಅವರು ಹಂತಹಂತವಾಗಿ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತಾರೆ. ಶಿಲ್ಪಿಯೊಬ್ಬನಿಗಿರುವ ಸಂಪೂರ್ಣ ಮಗ್ನತೆ, ಉತ್ಸಾಹ, ತಾಳ್ಮೆಗಳಿಂದ, ನಮ್ಮ ಆತ್ಮದ ಸೌಂದರ್ಯ ನಮ್ಮ ವ್ಯಕ್ತಿತ್ವಗಳ ಮೂಲಕ ಪ್ರಕಾಶಿಸಲು, ಗುರೂಜಿಯವರು ಶ್ರಮಿಸುತ್ತಿದ್ದಾರೆ. ನಮ್ಮ ಅಹಂ ಮತ್ತು ಮೊಂಡುತನದಿಂದ ಅವರಿಗೆ ವಿಫಲತೆಗಳು ಎದುರಾಗಬಹುದು ಆದರೆ ಅವರು ಪಟ್ಟುಬಿಡದೆ, ಪ್ರತಿಬಾರಿ ಹೊಸ ಹುರುಪಿನಿಂದ ಶ್ರಮಿಸಿ, ನಮ್ಮನ್ನು ಉತ್ತೇಜಿಸಲು ಹೊಸ ಹಾದಿಗಳನ್ನು ಹುಡುಕುತ್ತಾರೆ. ■

## ನಮ್ಮ ಆಧ್ಯಾತ್ಮಿಕ ತಂದೆ

**ವೈಶಾಲಿ ಜೋಶಿ; ಅನು: ಪಾಂಡುರಂಗ**


ನಮ್ಮ ಆಧ್ಯಾತ್ಮಿಕ ತಂದೆ ಗುರೂಜಿಯವರು, ನಮ್ಮೆಲ್ಲರೊಂದಿಗೆ ಒಂದು ಬಾಂಧವ್ಯ ಮತ್ತು ಎಲ್ಲ ಮಟ್ಟಗಳಲ್ಲಿ ದೈವೀಪ್ರೇಮವನ್ನು ಅಭಿವ್ಯಕ್ತಿಸುವ ಒಂದು ವಿಶೇಷವಾದ ಸಂಬಂಧವನ್ನು ಹೊಂದಿದ್ದಾರೆ. ನಮ್ಮ ಬಗ್ಗೆ ಅವರಿಗಿರುವ ಅನಿರ್ಬಂಧಿತ ಪ್ರೀತಿ ಯಾವ ಸಂದರ್ಭದಲ್ಲೂ ಬದಲಾಗುವುದಿಲ್ಲ. ಆದರೂ ಅದು ಅಂಧ ಪ್ರೀತಿಯಲ್ಲ ಮತ್ತು ಸಂಧಾನ ಮಾಡಿಕೊಳ್ಳುವುದಿಲ್ಲ. ನಮ್ಮ ತಪ್ಪುಗಳನ್ನು ತಿದ್ದಿ, ನಾವು ಆಧ್ಯಾತ್ಮಿಕವಾಗಿ ಬೆಳೆಯಲು ಆ ಪ್ರೀತಿ ಸಹಾಯಮಾಡುತ್ತದೆ. ಅವರು ನಮಗೆ ನಿರಂತರವಾಗಿ ಅವಕಾಶಗಳನ್ನು ಕೊಡುತ್ತಾ, ನಾವು ನಮ್ಮದೇ ಆದ ಗತಿಯಲ್ಲಿ ಕಲಿಯಲು ಅನುವು ಮಾಡಿಕೊಡುತ್ತಾರೆ. ನಾವು ನಮ್ಮ ಜೀವನ ಮತ್ತು ಸಾಧನೆಯ ಹೋರಾಟಗಳನ್ನು ದಾಟಿಬೆಳೆಯಲು, ಸದಾಕಾಲ ಸಹಾಯಹಸ್ತ ನೀಡಿ ತಾಳ್ಮೆಯಿಂದ ಕಾಯುತ್ತಾರೆ.

ನಮಗೆ ಎಣಿಕೆಯಿಲ್ಲದಷ್ಟು ಪ್ರಯೋಜನಗಳನ್ನು ನೀಡುತ್ತಿರುವ ಅವರು, ಒಬ್ಬ ಋಷಿಯಾಗಿದ್ದರೂ, ನಮ್ಮಿಂದ ಅವರು ನಿರೀಕ್ಷಿಸುವುದು ಅತಿ ಸರಳವಾದುದು – ನಾವು ಧ್ಯಾನ ಮಾಡಬೇಕು, ಪರಿವರ್ತನೆ ಹೊಂದಬೇಕು ಮತ್ತು ಬೆಳಕನ್ನು ಚಾನಲ್ ಮಾಡಬೇಕು. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| Guruji Speaks Vol - 4 | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

## ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

## ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

## ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

## ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

## ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

## ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಆಧ್ಯಾತ್ಮಿಕ ಅನುಭವಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಜನವರಿ 12 ರ 'ಐ ಗುರೂಜಿ' ಸಭೆಯಲ್ಲಿ ಇದ್ದಕ್ಕಿದ್ದಂತೆ ಮೇಲಿನಿಂದ ಹೆಚ್ಚಿನ ಪ್ರಮಾಣದ ಚೈತನ್ಯಗಳು ನನ್ನನ್ನು ಪ್ರವೇಶಿಸಿದಂತೆ ಅನಿಸಿತು. ಕೆಲವು ಕ್ಷಣಗಳ ನಂತರ ನನಗೆ ನನ್ನ ಶರೀರವು ಕಾಣದಾಯಿತು. ನಾನು ಮೇಲೆ ನೋಡಿದಾಗ, ನನ್ನ ಸುತ್ತಲೂ ಕೇವಲ ಬೆಳಕು ತುಂಬಿರುವಂತೆ ಮತ್ತು ಸ್ವಲ್ಪದೂರದಲ್ಲಿ ಹೊಳೆಯುತ್ತಿದ್ದ ಗುರೂಜಿಯವರ ಮುಖ ಮಾತ್ರ ಕಾಣಿಸುತ್ತಿತ್ತು. ಅವರ ಧ್ವನಿ ಎಲ್ಲೋ ದೂರದಿಂದ ಕೇಳಿ ಬರುತ್ತಿತ್ತು. ನನಗೆ ಸ್ವಲ್ಪ ಭಯವಾಗಿ ಬೆಳಕನ್ನು ಪ್ರಾರ್ಥಿಸಿದಾಗ, ನನ್ನ ದೇಹವು ನನಗೆ ಕಾಣಿಸಿತು.

– ರಾಖಿ

ಜನವರಿ ತಿಂಗಳಲ್ಲೊಂದು ದಿನ ನಾನು 'ವಿಶ್ವಚೇತನ ಮಂದಿರ'ಕ್ಕೆ ಸಂಪರ್ಕ ಕಲ್ಪಿಸಿಕೊಂಡು ಧ್ಯಾನ ಮಾಡಲಾರಂಭಿಸಿದೆ. ಆಗ 'ನಿನಗೆ ದೀಕ್ಷೆ ಕೊಡಲಾಗಿದೆ' ಎಂಬ ಧ್ವನಿ ಕೇಳಿಸಿತು. ಚೈತನ್ಯಗಳನ್ನು ನೀಡುವಾಗ ಆ ವಿಶ್ವಚೇತನ ಮಂದಿರವೇ ನಿನ್ನೊಂದಿಗೆ ಮಾತನಾಡಿತು ಎಂದು ನಂತರ ಗುರೂಜಿಯವರು ಹೇಳಿದರು.

– ನಂದಿತಾ ವಿಜಯನ್

ಇತ್ತೀಚೆಗೆ ನಾನು ಕರ್ನಾಟಕದ ಉತ್ತರಭಾಗದಲ್ಲಿ ಇರುವ ಒಬ್ಬ ಸಂತಶ್ರೇಷ್ಠರ ಪವಿತ್ರ ಸ್ಥಳವೊಂದಕ್ಕೆ ಹೋಗಿದ್ದೆ. ಅಲ್ಲಿ ರಾತ್ರಿ 8.30ರ ನಂತರ ಯಾರನ್ನೂ ದೇವಾಲಯದ ಒಳಗೆ ಬಿಡುವುದಿಲ್ಲ. ಒಂದು ರಾತ್ರಿ, ಆ ಮಂದಿರದಿಂದ ಸುಶ್ರಾವ್ಯವಾಗಿ ಹಾಡುತ್ತಿದ್ದ ಓರ್ವ ಗಂಡಸಿನ ಧ್ವನಿ ಕೇಳಿಬಂತು. ದೇವತೆಗಳು ರಾತ್ರಿ ಸಮಯದಲ್ಲಿ ಇಲ್ಲಿ ಬಂದು ಪೂಜೆಯನ್ನು ಸಲ್ಲಿಸುತ್ತಾರೆಂದು ಹಿರಿಯರೊಬ್ಬರು ತಿಳಿಸಿದರು. ಆಗ ನಾವೆಲ್ಲ ಭಾಗ್ಯಶಾಲಿಗಳೆಂದು ನಮಗನಿಸಿತು.

– ಸೌಮ್ಯಾ ಅಜಯ್

ಪ್ರತಿಯೊಂದರ ಕೇಂದ್ರಸ್ಥಾನ ಬೆಳಕೇ ಆಗಿದೆ ಮತ್ತು ಬೆಳಕಿನ ಕೇಂದ್ರ ಪ್ರೀತಿ ಎಂದು ಲೇಖಕರು ವಿವರಿಸಿರುವ ಒಂದು ಪುಸ್ತಕವನ್ನು ನಾನು ಓದುತ್ತಿದ್ದೆ. ತಕ್ಷಣ ನನಗೆ ಏನಾಯಿತೆಂದು ತಿಳಿಯದೆ ಬಹಳ ಸಂತೋಷವನ್ನು ಅನುಭವಿಸಿದೆ. ನಾನು ಬಹಳ ಸಮಯದವರೆಗೆ ನನ್ನ ಸುತ್ತಲಿನ ವಸ್ತುಗಳೆಲ್ಲಾ ಹೊಳೆಯುತ್ತಿರುವಂತೆ ಭಾವಿಸಿ, ನನ್ನ ನಿಜವಾದ ಮನೆಯಲ್ಲಿದ್ದಂತೆ ಅನಿಸಿ ಮುಗುಳ್ನಗುತ್ತಿದ್ದೆ. ಬಹುಶಃ ಅನೇಕ ವರ್ಷಗಳ ಬಳಿಕ ನಾನು ಹೃತ್ಪೂರ್ವಕವಾಗಿ ನಗಲು ಸಾಧ್ಯವಾಯಿತು. ಈಗ ಪ್ರೀತಿಯನ್ನು ಹೊಂದಿರುವುದು ಹೇಗೆ ಎಂದು ಸ್ವಲ್ಪ ಮಟ್ಟಿಗೆ ನನಗೆ ಅರ್ಥವಾಗಿದೆ. ಇದು ನನಗೆ ಋಷಿಗಳು ಹಾಗೂ ಗುರೂಜಿಯವರು ನೀಡಿದ ಅನುಗ್ರಹ.

– ರಾಕೇಶ್ ಮಿಶ್ರಾ

ಇತ್ತೀಚೆಗೆ ನನಗೆ ನಿಜವಾಗಿಯೂ ಬೆಳಕಿನ ಅನುಭವವಾಗುತ್ತಿದೆ. ನನ್ನ ಮನಸ್ಸನ್ನು ಸುಲಭವಾಗಿ ಕೇಂದ್ರೀಕರಿಸಲು ಸಾಧ್ಯವಾಗಿದೆ ಮತ್ತು ತನ್ನಷ್ಟಕ್ಕೆ ಮೇಲೇರುತ್ತಿದ್ದ ಚೈತನ್ಯವು ನನ್ನ ಸುತ್ತ ಬೆಳಕಿನ ಆಸ್ಫೋಟನೆಗೆ ಅನುವು ಮಾಡಿದಂತೆ ಅನಿಸುತ್ತದೆ. ನನಗೆ ಬೆಳಕು ಕಾಣಿಸದಿದ್ದರೂ, ನನ್ನ ಸುತ್ತ ಬೆಳಕಿರುವ ಅನುಭವವಾಗುತ್ತಿದೆ. ಹೆಚ್ಚಾಗಿ ಬಿಳಿಬಣ್ಣದ ಬೆಳಕಿನ ಅನುಭವವಾದರೂ, ಒಮ್ಮೆ ನನ್ನ ಧ್ಯಾನದಲ್ಲಿ ಬೆಳ್ಳಿಯ ಕಿಡಿಗಳಂತೆ ಬೆಳಕು ಸ್ಫೋಟಿಸಿದ ಅನುಭವವಾಯಿತು. ನಾನು ನನ್ನ ಹೃದಯದಲ್ಲಿನ ನಿಶ್ಚಲತೆಯನ್ನು ಬಹಳ ಬೇಗ ತಲುಪಿದೆ. ಕೆಲವುಸಲ ನನಗೆ ನನ್ನ ದೇಹದ ಅರಿವಿಲ್ಲದಾಗಿ, ನಾನೊಂದು ಬೆಳಕಿನ ಚೆಂಡು ಎಂದೆನಿಸುತ್ತದೆ.

– ಗೀತಾಂಜಲಿ ಬಾಲಕೃಷ್ಣನ್

ನನ್ನ ಅಣ್ಣನ ಮದುವೆಯ ವಾರ್ಷಿಕೋತ್ಸವದಂದು ಅವರನ್ನು ಅಭಿನಂದಿಸಲು ಒಂದು ಇ–ಮೇಲ್ ಕಳುಹಿಸಲು ಪ್ರಯತ್ನಿಸಿದೆ, ಆದರೆ ಅದು ಸಾಧ್ಯವಾಗಲಿಲ್ಲ. ಆ ದಿನವಿಡೀ ಮನೆಕೆಲಸದಲ್ಲಿ ವ್ಯಸ್ತಳಾಗಿದ್ದುದರಿಂದ ನನಗದು ಸಂಪೂರ್ಣವಾಗಿ ಮರೆತು ಹೋಯಿತು. ಆ ದಿನ ರಾತ್ರಿ ನಾನು ಸೂಕ್ಷ್ಮಶರೀರದಲ್ಲಿ ಅವರಲ್ಲಿಗೆ ಹೋಗಿ ಅವರಿಗೆ ಶುಭಾಶಯಗಳನ್ನು ತಿಳಿಸಿದ ಹಾಗೆ ಅನಿಸಿತು. ಆಗ ಅವರು ನನ್ನನ್ನು ಗುರುತಿಸಿ ಪ್ರತಿಸ್ಪಂದಿಸಿದರು. ನನಗೆ ಆಶ್ಚರ್ಯವಾಗಿ 'ನನ್ನ ಉಪಸ್ಥಿತಿಯನ್ನು ಗುರುತಿಸಲು ಸಾಧ್ಯವಾಯಿತೇ?' ಎಂದು ಅವರನ್ನು ಕೇಳಿದಾಗ, ಅವರು 'ಹೌದು' ಎಂದು ಹೇಳಿದರು. ನಂತರ ನಾನು ನನ್ನ ಭೌತಿಕ ಶರೀರಕ್ಕೆ ಹೇಗೆ ಹಿಂತಿರುಗಿದೆ ಎಂದು ತಿಳಿಯಲಿಲ್ಲ. ಇದೊಂದು ಅದ್ಭುತ ಮತ್ತು ರೋಮಾಂಚಕಾರಿ ಘಟನೆ!

– ಕಿರಣ್ಮಯಿ

ಒಂದು ದಿನ ನನಗೆ ರಾತ್ರಿ ನಿದ್ದೆ ಬರದ ಕಾರಣ ವ್ಯಾಸ ಮಹರ್ಷಿಗಳನ್ನು ಪ್ರಾರ್ಥಿಸಿ, ನನ್ನಲ್ಲಿ ಬೆಳಕನ್ನು ತುಂಬಿಕೊಂಡು ಬೆಳಕಿನ ಮಹಾಸಾಗರವನ್ನು ಅನುಭವಿಸುವ ತಂತ್ರವನ್ನು ಮಾಡಿದೆ. ಕ್ಷಣಮಾತ್ರದಲ್ಲಿ ನಾನು ಕುಳಿತಿದ್ದ ಸ್ಥಿತಿಯಲ್ಲಿಯೇ ಆಕಾಶದೊಳಗೆ ಚಿಮ್ಮಲ್ಪಟ್ಟೆ. ಅದು ನನಗೆ ಸ್ಪಷ್ಟವಾಗಿ ತಿಳಿಯುತ್ತಿತ್ತು. ನಾನು ನನ್ನ ಎಡಗಡೆ ನೋಡಿದಾಗ, ಕತ್ತಲಿನ ಆಕಾಶವನ್ನು ಮತ್ತು ದೂರದಲ್ಲಿ ಬೆಳಕಿನ ಚುಕ್ಕಿಗಳಂತೆ ಹೊಳೆಯುತ್ತಿರುವ ನಕ್ಷತ್ರಗಳನ್ನು ನೋಡಿದೆ. ನಾನು ಭಗವಂತನ ಅವ್ಯಕ್ತ ಭಾಗದಲ್ಲಿ ಇದ್ದುದು ನನಗೆ ತಿಳಿಯುತ್ತಿತ್ತು. ನಾನು ನನ್ನ ಬಲಗಡೆ ನೋಡಿದಾಗ, ಮೇಲಿನಿಂದ ನಮ್ಮ ಭೂಮಿಯನ್ನು ನೋಡಿದೆ.

– ಅಭಿಲಾಷಿತ

ಕೆಲವು ದಿನಗಳ ಹಿಂದೆ ನಾನು ಪ್ರಾಣಶಕ್ತಿಯನ್ನು ಪಡೆಯುವ ಹೊಂಬಣ್ಣದ ಬೆಳಕಿನ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದೆ. ಆಗ, ಧ್ಯಾನಿಯಾಗಿರುವ ನನ್ನ ಸ್ನೇಹಿತೆಯೊಬ್ಬರು ದೂರವಾಣಿ ಕರೆಯನ್ನು ಮಾಡಿದರು. ಆಕೆ ಅತೀಂದ್ರಿಯ ದೃಷ್ಟಿಯುಳ್ಳವರಾದ್ದರಿಂದ, ಆ ಸಮಯದಲ್ಲಿ ಹೊಂಬಣ್ಣದ ಹಾಗೂ ಕಿತ್ತಳೆ ಬಣ್ಣದ ಪ್ರಕಾಶಮಾನವಾದ ಬೆಳಕಿನ ಗೋಲದಿಂದ ಮಂಜಿನಂತೆ ನನ್ನ ಮೇಲೆ ಸುರಿಯುತ್ತಿದ್ದ ಹೊಂಬಣ್ಣದ ಕಿರಣಗಳನ್ನು ಕಂಡೆ ಎಂದು ನನಗೆ ತಿಳಿಸಿದರು. ಆಕೆಗೆ ನನ್ನನ್ನು ಒಂದು ಹೊಂಬಣ್ಣದ ಬೆಳಕಾಗಿ ಕಾಣಲು ಸಾಧ್ಯವಾಯಿತು.

– ನಾಗಮಣಿ ಚಂದ್ರಶೇಖರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ